ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಮ್ಯಾಕ್ಸ್ವರ್ತ್ ರಿಯಾ ಇಂಡಿಯಾ ಅಮಿಟೆಡ್ ಹಾಗೂ ಇತರರು ವಿರುದ್ಧ ಎಂ.ಕೆ. ವೀರೇಂದ್ರ ಬಾಬು

ಕ್ರಿಮಿನಲ್ ಪುನರ್ ಪರಿಶೀಲನಾಸಂಖ್ಯೆ: 1407/2018, ದಿನಾಂಕ 13 ನೇ ಸೆಪ್ಟೆಂಬರ್, 2019.

ಆದೇಶ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಸಿ.ಸಿ.ಸಂಖ್ಯೆ: 13506/2011 ರಲ್ಲಿ XV ನೇ ಎ.ಸಿ.ಎಂ.ಎಂ. ಬೆಂಗಳೂರು, ಇವರು ಹೊರಡಿಸಿದದಿನಾಂಕ: 12.06.2013 ರ ಅಪರಾಧ ನಿರ್ಣಯ ಹಾಗೂ 148 ಮ್ಯಾಕ್ಸ್ವರ್ತ್ ರಿಯಾ ಇಂಡಿಯಾ ಅಮಿಟೆಡ್ ಹಾಗೂ ಇತರರು -ವಿರುದ್ಧ ಎಂ.ಕೆ. ವೀರೇಂದ್ರ ಬಾಬು ಶಿಕ್ಷೆಯ ತೀರ್ಪು ಹಾಗೂ ಆದೇಶವನ್ನು ಸ್ಥಿರೀಕರಿಸಲಾಗಿದ್ದು, ಇದರ ಮೇರೆಗೆ ಕ್ರಿಮಿನಲ್ ಅಪೀಲುಸಂಖ್ಯೆ: 318/2013 ರಲ್ಲಿ 55 ನೇ ಹೆಚ್ಚುವರಿ ನಗರ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯ, ಬೆಂಗಳೂರು (ಸಿಸಿಎಚ್ -50) ಇವರು ಹೊರಡಿಸಿದದಿನಾಂಕ: 10.12.2018 ರ ತೀರ್ಪು ಹಾಗೂ ಆದೇಶವನ್ನು ಪ್ರಶ್ನಿಸಿ 1 ನೇ ಹಾಗೂ 2 ನೇ ಆಪಾದಿತರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರಾದ ಶ್ರೀ ಪಿ.ಎಸ್. ರಾಜಗೋಪಾಲ್ರವರ ಹಾಗೂ ಪ್ರತ್ಯರ್ಜಿದಾರ-ದೂರುದಾರರ ಪರವಾಗಿ ಹಾಜರಾಗಿರುವ ವಕೀಲರಾದ ಶ್ರೀ ಶರತ್ ಎಸ್. ಗೌಡರವರ ವಾದವನ್ನು ನಾವು ಆಲಿಸಿರುತ್ತೇವೆ.

3. ಪ್ರಶ್ನಿತ ವಿವಾದಾಂಶವನ್ನು ಪರಿಗಣಿಸುವ ಮೊದಲು, ವಾದಗಳು ನಡೆಯುವ ಅವಧಿಯಲ್ಲಿ, ದಿನಾಕ:28.08.2019 ರ ಮೆಮೊವನ್ನು ಅರ್ಜಿದಾರರು ಸಲ್ಲಿಸಿದ್ದು, ಸದರಿ ಮೆಮೊದಲ್ಲಿ ಅಧಿವಿಚಾರಣಾ ನ್ಯಾಯಾಲಯವು 1 ನೇ ಅರ್ಜಿದಾರನ ವಿರುದ್ಧ ಯಾವುದೇ ಅಪರಾಧ ನಿರ್ಣಯವನ್ನು ಹೊರಡಿಸದಿರುವುದರಿಂದ ಮತ್ತು ತಪ್ಪು ಗ್ರಹಿಕೆಯಿಂದಾಗಿ 1 ನೇ ಆಪಾದಿತನು ಅರ್ಜಿಯನ್ನು ಸಲ್ಲಿಸಿರುವುದು 1 ನೇ ಅರ್ಜಿದಾರನಿಗೆ ಸಂಬಂಧಪಡುವಷ್ಟರಮಟ್ಟಿಗೆ ಒತ್ತಾಯ ಮಾಡದಿರುವುದರಿಂದ, ಅರ್ಜಿಯನ್ನು ಹಿಂಪಡೆಯಲು ಅನುಮತಿಯನ್ನು ಕೋರಲಾಗಿರುತ್ತದೆ ಎಂಬುದನ್ನು ಇಲ್ಲಿ ನಮೂದಿಸುವುದು ಸೂಕ್ತ.ತದನುಸಾರವಾಗಿ, ಈ ನ್ಯಾಯಾಲಯವು ತನ್ನದಿನಾಂಕ: 28.08.2019 ರ ಆದೇಶದ ಮೇರೆಗೆ 1 ನೇ ಅರ್ಜಿದಾರ -1 ನೇ ಆಪಾದಿತನು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ, ಅರ್ಜಿದಾರರ ಅರ್ಜಿದಾರರ ಜವಾಬ್ದಾರಿಯ ಮೇಲೆ ಹಿಂತೆಗೆದುಕೊಳ್ಳಲಾಗಿದೆ.

4. ದೂರಿನ ಪ್ರಕಾರ, ಮೊಕದ್ದಮೆಯ ಸಂಕ್ಷಿಪ್ತ ಸಾರಾಂಶವೆಂದರೆ, ದೂರುದಾರ ಹಾಗೂ ಆಪಾದಿತರು ಪರಸ್ಪರ ಪರಿಚಿತರಾಗಿದ್ದರು.2006-07ನೇ ವರ್ಷದಲ್ಲಿ, ದೂರುದಾರನ ಕೃಷಿ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನಪಡಿಸಿಕೊಂಡಿದ್ದು, ಸದರಿ ಸ್ವಾಧೀನತೆಗೆ ಅವನಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡಲಾಗಿತ್ತು.ಸದರಿ ಮೊತ್ತವನ್ನು ದೇವನಹಳ್ಳಿ ತಾಲ್ಲೂಕಿನಲ್ಲಿ ಮತ್ತು ಅದರ ಆಸುಪಾಸಿನಲ್ಲಿ ಇತರ ಪರಿವರ್ತಿತ ಭೂಮಿಯಲ್ಲಿ ಹೂಡುವ ಉದ್ದೇಶ ಹೊಂದಿದ್ದ ಅವನು ತಿಂಡ್ಲು ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ-ಇಲ್ಲಿ 5 ಎಕರೆ ವಿಸ್ತೀರ್ಣವುಳ್ಳ ಸರ್ವೆಸಂಖ್ಯೆ: 193 ನ್ನು ಹೊಂದಿರುವ ಪರಿವರ್ತಿತ ಜಮೀನನ್ನು ಹೊಂದಿದ್ದ ತಿಪ್ಪಯ್ಯ ಎಂಬಾತನನ್ನು ಸಂಪರ್ಕಿಸಿದ.ಅವನು ಸದರಿ ಸರ್ವೆಸಂಖ್ಯೆ: 193 ರಲ್ಲಿ ಒಂದು ಎಕರೆ ಜಮೀನನ್ನು ಹಾಗೂ ಸರ್ವೆಸಂಖ್ಯೆ: 189 ರಲ್ಲಿ 2 ಎಕರೆ ಜಮೀನನ್ನು ದೂರುದಾರನಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದ.ದಿನಾಂಕ: 16.07.2008 ರಂದು, ನೋಂದಾಯಿತ ಮಾರಾಟ ಒಪ್ಪಂದ

ಮಾಡಿಕೊಳ್ಳಲಾಯಿತು.ಇದರಡಿಯಲ್ಲಿ ಸದರಿ ತಿಪ್ಪಯ್ಯನು ಪ್ರತಿ ಎಕರೆಗೆ 30 ಲಕ್ಷ ರೂಪಾಯಿಗಳಂತೆ ಮೂರು ಎಕರೆ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದ.ದೂರುದಾರನು ಎರಡು ನೋಂದಾಯಿತ ಮಾರಾಟ ಒಪ್ಪಂದ ಪತ್ರಗಳ ನಿಬಂಧನೆಗಳ ಪ್ರಕಾರ, 75 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಸಂದಾಯ ಮಾಡಿದ್ದು, ಉಳಿದ 15 ಲಕ್ಷ ರೂಪಾಯಿಗಳನ್ನು ಅಂತಿಮ ಕ್ರಯಪತ್ರದ ಅಂತಿಮ ನೋಂದಾವಣೆಯ ಸಮಯದಲ್ಲಿ ಸಂದಾಯ ಮಾಡಬೇಕಾಗಿತ್ತು.ಅಷ್ಟೇ ಅಲ್ಲದೆ, ಪುನರಾವರ್ತಿತ ಒತ್ತಾಯದ ಮೇಲೆ ತಿಪ್ಪಯ್ಯನು ಬಾಕಿ ಹಣವನ್ನು ಸ್ವೀಕರಿಸಿ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡಲು ವಿಫಲನಾಗಿದ್ದು, ತದನಂತರ, ಸದರಿ ತಿಪ್ಪಯ್ಯನು 1 ನೇ ಆಪಾದಿತನಿಗೆ ಭೂಮಿಯನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದು, ಅವನಿಗೆ ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಟ್ಟಿದ್ದ ಜಮೀನನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುವುದು ತಿಳಿದುಬಂದಿರುತ್ತದೆ.ಮುಂದುವರೆಸುತ್ತಾ, ಸದರಿ ತಿಪ್ಪಯ್ಯನು 1 ನೇ ಆಪಾದಿತನ ಪರವಾಗಿ ಬರೆದುಕೊಡಲಾದ ಕ್ರಯಪತ್ರಕ್ಕೆ ಒಪ್ಪಿಗೆ ನೀಡಿರುವ ಪಕ್ಷಕಾರನಾಗಿ ತನ್ನ ಸಹಿಯನ್ನು ಹಾಕಿರುವ ಗೋಪಾಲ್ ಎ ೦ ಬುವವನ ಪರವಾಗಿ ದೂರುದಾರನಾ ಬರೆದುಕೊಡಲಾಗಿದೆಯೆಂದು ಆಪಾದಿಸಲಾದ ಮುಖ್ತ್ಯಾರನಾಮೆಯನ್ನು ಸೃಜಿಸಿರುತ್ತಾನೆ.ವಾಸ್ತವವಾಗಿ, ಗೋಪಾಲ ಎಂಬ ಹೆಸರಿನ ಅಂಥ ವ್ಯಕ್ತಿಯು, ಬುಟ್ಟ ರಾಮನಹಳ್ಳಿ ಗ್ರಾಮದಲ್ಲಿ ವಾಸವಿರುವುದಿಲ್ಲ.ಸದರಿ ಸಂಗತಿಯು ತಿಳಿದು ಬಂದ ನಂತರ ದೂರುದಾರನು, ಆಪಾದಿತ ತಿಪ್ಪಯ್ಯ ಹಾಗೂ ಗೋಪಾಲನ ವಿರುದ್ಧ ದೂರನ್ನು ದಾಖಲಿಸಿದ್ದಾನೆ.ದೂರನ್ನು ಸಲ್ಲಿಸಿರುವ ಬಗ್ಗೆ ತಿಳಿದುಬಂದ ನಂತರ, ಅವರು ವಿಷಯವನ್ನು ಇತ್ಯರ್ಥಗೊಳಿಸಿಕೊಳ್ಳಲು ದೂರುದಾರನನ್ನು ಸಂಪರ್ಕಿಸಿರುತ್ತಾರೆ.ಸುದೀರ್ಘ ಮಾತುಕತೆಯ ನಂತರ ಪಕ್ಷಕಾರರ ನಡುವೆ ವಿಷಯವನ್ನು ಇತ್ಯರ್ಥಪಡಿಸಲಾಗಿತ್ತು.ಆಪಾದಿತನು, ದೂರುದಾರನಿಗೆ 2 ಕೋಟಿ ರೂಪಾಯಿಗಳನ್ನು ಸಂದಾಯ ಮಾಡಲು ಒಪ್ಪಿಕೊಂಡಿದ್ದು, ದೂರುದಾರನು ಸದರಿ ಆಸ್ತಿಯ ಮೇಲಿನ ಕೇಮನ್ನು ಬಿಟ್ಟುಬಿಡಬೇಕಾಗಿತ್ತು.ಸದರಿ ಪಕ್ಷಕಾರರ ನಡುವೆ ಒಡಂಬಡಿಕೆ ಅಥವಾ ಇತ್ಯರ್ಥವು ಏರ್ಪಟ್ಟಿತ್ತು.ಸದರಿ ಇತ್ಯರ್ಥದ ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ, ಆಪಾದಿತನು ದೂರುದಾರನಿಗೆ 25 ಲಕ್ಷ ರೂ.ಗಳ ನಗದನ್ನು ಸಂದಾಯ ಮಾಡಿದ್ದು, ಪ್ರತಿಯೊಂದೂ ತಲಾ 25 ಲಕ್ಷ ಮೊತ್ತವಿದ್ದ ಮೂರು ಚೆಕ್ಕುಗಳನ್ನು, 5 ಲಕ್ಷ ರೂಪಾಯಿಗಳ ಹಾಗೂ 1 ಕೋಟಿ ರೂಪಾಯಿಗಳ ಎರಡು ಚೆಕ್ಗಳನ್ನು ನೀಡಿದ್ದನು.ಸದರಿ ಚೆಕ್ಕುಗಳನ್ನು 1 ನೇ ಆಪಾದಿತನ ಕಂಪನಿಯ ಪ್ರತಿನಿಧಿಯಾಗಿ 2 ನೇ ಆಪಾದಿತನು ನೀಡಿದ್ದನು.ಸದರಿ ಚೆಕ್ಕುಗಳನ್ನುದಿನಾಂಕ: 04.06.2011 ರ ಇತ್ಯರ್ಥ ಪತ್ರದ ರೂಪದಲ್ಲಿ ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಋಣಕ್ಕೆ ಸಂಬಂಧಪಟ್ಟಂತೆ ನೀಡಲಾಗಿದೆ.

5. ದೂರುದಾರನು, ತನ್ನ ಬ್ಯಾಂಕರನ ಮೂಲಕ ನಗದಿಗಾಗಿ ಸದರಿ ಚೆಕ್ಕುಗಳನ್ನು ಸಲ್ಲಿಸಿದಾಗ, “ ಹಣ ಸಾಕಷ್ಟಿರುವುದಿಲ್ಲ ” ಎಂಬ ಹಿ ೦ ಬರಹದೊಂದಿಗೆ ಅಮಾನ್ಯಗೊಂಡಿವೆಯೆಂದು ಅವುಗಳನ್ನು ಹಿಂದಕ್ಕೆ ಕಳುಹಿಸಲಾಗಿತ್ತು.ದೂರುದಾರನು, ಆಪಾದಿತನಿಗೆದಿನಾಂಕ: 12.08.2011 ರಂದು ಕಾನೂನು ತಗಾದೆ ನೋಟೀಸನ್ನು ನೀಡಿದ್ದು, ಅದಕ್ಕೆ 2 ನೇ ಆಪಾದಿತನು ಹೊಣೆಗಾರಿಕೆಯನ್ನು ನಿರಾಕರಿಸಿ ಪ್ರತ್ಯುತ್ತರವನ್ನು ಕಳುಹಿಸಿದ್ದ.ನಿಗದಿತ ಸಮಯದೊಳಗೆ ಮೊತ್ತವು ಸಂದಾಯವಾಗದಿರುವುದರಿಂದ ಖಾಸಗಿ ದೂರನ್ನು ನೋಂದಾಯಿಸಲಾಗಿತ್ತು.ಮಾನ್ಯ ದಂಡಾಧಿಕಾರಿಯವರು ಸಂಜ್ಞಾನಕ್ಕೆ ತೆಗೆದುಕೊಂಡು, ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸಿದ ನಂತರ, ಆಪಾದಿತನಿಗೆ ಸಮನುಗಳನ್ನು ಜಾರಿಗೊಳಿಸಿದರು.2 ನೇ ಆಪಾದಿತನು, ಕಾನೂನು ಅಸ್ತಿತ್ವ ಹೊಂದಿರುವ 1 ನೇ ಆಪಾದಿತ-ಕಂಪನಿ ಪರವಾಗಿ ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾನೆ.ಇದಾದ ನಂತರ ವಾದವನ್ನು ದಾಖಲಿಸಲಾಗಿತ್ತು.ಆಪಾದಿತನು ತಾನು ತಪ್ಪಿತಸ್ಥನಲ್ಲವೆಂದು ವಾದಿಸಿದನು.ಹಾಗಾಗಿ ಅಧಿವಿಚಾರಣೆಯನ್ನು ನಡೆಸಲಾಗಿತ್ತು.

6. ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ, ದೂರುದಾರನು ಸ್ವತಃ ಪ್ರಾ.ಸಾ ..ಎಂದು ವಿಚಾರಣೆಗೆ ಒಳಗಾಗಿ 24 ದಸ್ತಾವೇಜುಗಳನ್ನು ಗುರುತಿಸಿದನು.ಇದಾದ ನಂತರ, ಆಪಾದಿತನ

ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಮೇರೆಗೆ ದಾಖಲಿಸಲಾಗಿದ್ದು, ಆಪಾದಿತನನ್ನು ಪ್ರತಿವಾದಿ ಸಾಕ್ಷ್ಯ.ಹಾಗೂ ಪ್ರತಿವಾದಿ ಸಾಕ್ಷ .2 ಎಂದು ಇಬ್ಬರು ಸಾಕ್ಷಿದಾರರಂತೆ ವಿಚಾರಣೆ ನಡೆಸಲಾಗಿದ್ದು, ನಿಶಾನೆ.ಡಿ .1 ಎಂಬ ಒಂದು ದಸ್ತಾವೇಜನ್ನು ಗುರುತು ಹಾಕಲಾಯಿತು.ಪಕ್ಷಕಾರರ ಪರವಾಗಿ ಹಾಜರಾಗಿದ್ದ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ 2 ನೇ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿತ್ತು.

7. ಸದರಿ ತೀರ್ಪು ಹಾಗೂ ಅಪರಾಧ ನಿರ್ಣಯದಿಂದ ಬಾಧಿತರಾಗಿ 1 ನೇ ಹಾಗೂ 2 ನೇ ಆಪಾದಿತರು, ಅಪೀಲು ನ್ಯಾಯಾಲಯದ ಮುಂದೆ ಕ್ರಿಮಿನಲ್ ಅಪೀಲನ್ನು ಹೂಡಿರುತ್ತಾರೆ.ಅಪೀಲು ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಪರಿಗಣಿಸಿದ ನಂತರ ಅಪೀಲನ್ನು ವಜಾಗೊಳಿಸಿತು.ಸದರಿ ತೀರ್ಪಿನ ಸರಿತನ ಹಾಗೂ ಕಾನೂನುಸಮ್ಮತತೆಯನ್ನು ಪ್ರಶ್ನಿಸಿ ಪ್ರಸ್ತುತ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

8. ಅಪೀಲುದಾರರು-ಆಪಾದಿತರ ಪರ ಹಾಜರಾದ ಮಾನ್ಯ ಹಿರಿಯ ವಕೀಲರ ವಾದವೆಂದರೆ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಪ್ರಕಾರ, ಆಪಾದಿತನಿಗೆ ನೋಟೀಸನ್ನು ಜಾರಿ ಮಾಡಬೇಕಾಗಿತ್ತು.ಪ್ರಸ್ತುತ ಮೊಕದ್ದಮೆಯಲ್ಲಿ, 1 ನೇ ಆಪಾದಿತನಿಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ. 2 ನೇ ಆಪಾದಿತನಿಗೆ ಮಾತ್ರ ನಿಶಾನೆ ಪಿ .17 ರ ಪ್ರಕಾರ ನೋಟೀಸನ್ನು ಜಾರಿ ಮಾಡಲಾಗಿದೆ.1 ನೇ ಆಪಾದಿತ-ಕಂಪನಿಗೆ ಯಾವುದೇ ನೋಟೀಸನ್ನು ನೀಡದಿದ್ದರೆ, ಆಗ ಅಂಥ ಸಂದರ್ಭಗಳಲ್ಲಿ ನೋಟೀಸನ್ನು ನೀಡುವ ಮೂಲಕ ಚೆಕ್ಕುಧಾರಕನು ಲಿಖಿತದಲ್ಲಿ ಯಾವುದೇ ತಗಾದೆ ಮಾಡಲಾಗುವುದಿಲ್ಲ.ಹಾಗಾಗಿ ದೂರನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣವಿರುವುದಿಲ್ಲ.ಚೆಕ್ಕನ್ನು ಡ್ರಾಯರ್ಗೆ ಲಿಖಿತದಲ್ಲಿ ನೋಟೀಸನ್ನು ಸ್ವೀಕರಿಸಿದ ನಂತರ 15 ದಿನಗಳೊಳಗೆ ಆಪಾದಿತನು ಮೊತ್ತವನ್ನು ಸಂದಾಯ ಮಾಡದಿದ್ದಾಗ ಮಾತ್ರ ದೂರನ್ನು ದಾಖಲಿಸುವ ಹಕ್ಕು ಉದ್ಭವಿಸುತ್ತದೆ.ಮತ್ತೊಂದು ಕಡೆ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ ವಿಧಿಸಲಾದ ಷರತ್ತುಗಳನ್ನು ಪಾಲಿಸದಿರುವುದಕ್ಕೆ ದೂರನ್ನು ಸಲ್ಲಿಸುವ ವ್ಯಾಜ್ಯ ಕಾರಣದ ಹಕ್ಕು ಉದ್ಭವಿಸುತ್ತದೆ.2 ನೇ ಆಪಾದಿತನ ಹೊಣೆಗಾರಿಕೆಯೇನೆಂದರೆ, ಅವರು 1 ನೇ ಆಪಾದಿತ-ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿರುವುದರಿಂದ, ಅವರದು ಪರ ಪ್ರಾತಿನಿಧಿಕವಾದ ಹೊಣೆಗಾರಿಕೆಯಾಗಿದೆ.ನೋಟೀಸನ್ನು ಜಾರಿಗೊಳಿಸದಿರುವುದಕ್ಕಾಗಿ 1 ನೇ ಆಪಾದಿತನ ವಿರುದ್ಧ ಯಾವುದೇ ವ್ಯಾಜ್ಯ ಕಾರಣವಿಲ್ಲದಿರುವಾಗ, 2 ನೇ ಆಪಾದಿತನು ಕೂಡ ಯಾವುದೇ ಅಪರಾಧ ಮಾಡಿರುವುದಿಲ್ಲ.ವರ್ಗಾವಣೀಯ ಲಿಖಿತಗಳ ಅಧಿನಿಯಮದ 14 ನೇ ಪ್ರಕರಣದ ಪ್ರಕಾರ, ಅಪರಾಧವನ್ನು ಮಾಡಿರುವ ವ್ಯಕ್ತಿಯು ಕಂಪೆನಿಯಾಗಿದ್ದರೆ, ಅದನ್ನು ಅಪರಾಧಿಯೆಂದು ತೋರಿಸಬೇಕಾಗುತ್ತದೆ ಹಾಗೂ ಪ್ರಾತಿನಿಧಿಕವಾಗಿ, ಅದರ ಪ್ರಭಾರದಲ್ಲಿರುವ ವ್ಯಕ್ತಿಗಳು ಕಂಪನಿಯ ವ್ಯವಹರಣೆಗಳಿಗೆ ಹೊಣೆಗಾರರಾಗಿರುತ್ತಾರೆ.ಕಂಪನಿಗೆ ನೋಟೀಸನ್ನು ಜಾರಿ ಮಾಡದೆ, 2 ನೇ ಆಪಾದಿತನ ಆರೋಪವನ್ನು ಸಮರ್ಥಿಸಲಾಗುವುದಿಲ್ಲ.ಆಗ ವರ್ಗಾವಣೀಯ ಲಿಖಿತಗಳ ಅಧಿನಿಯಮದ, 138 ನೇ ಪ್ರಕರಣದ ಮೇರೆಗೆ, ಪೂರ್ವ ಷರತ್ತಾಗಿರುವ ಕಂಪನಿಯ ವಿರುದ್ಧ ಯಾವುದೇ ತಗಾದೆ ನೋಟೀಸು ಇರುವುದಿಲ್ಲ ಎಂಬುದೂ ಕೂಡ ಆಗಿದೆ. ತನ್ನ ವಾದವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಅವರು, ಹಿಮಾಂಶು -ವಿರುದ್ಧ ಬಿ. ಶಿವಮೂರ್ತಿ ಮತ್ತು ಇತರರು ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬಿಸಿದ್ದಾರೆ.

9. ಮುಂದುವರೆಸುತ್ತಾ, ಅಪೀಲು ನ್ಯಾಯಾಲಯವು,ದಿನಾಂಕ: 22.12.2017 ಹಾಗೂ 30.12.2017 ರಂದು ವಿಷಯವನ್ನು ಆಲಿಸಿತು.ಇದಾದ ತರುವಾಯ, ವಿಷಯವನ್ನು ಆದೇಶಗಳಿಗಾಗಿ ಮುಂದೂಡಲಾಗಿತ್ತು.ದಿನಾಂಕ: 31.01.2018 ರಂದು ಮೊಕದ್ದಮೆಯನ್ನು ಮತ್ತೆ ವ್ಯವಹರಣೆಗಾಗಿ

ತೆಗೆದುಕೊಳ್ಳಲಾಯಿತು.ದಿನಾಂಕ: 17.03.2018 ರಂದು ಮತ್ತೆ ವಾದಗಳನ್ನು ಆಲಿಸಲಾಯಿತು ಹಾಗೂದಿನಾಂಕ: 20.03.2018 ರಂದು ತೀರ್ಪಿಗಾಗಿ ಮುಂದೂಡಲಾಯಿತು.ಆಪಾದಿತರ ಪರವಾಗಿ ಹಾಜರಾದ ಮಾನ್ಯ ವಕೀಲರ ಮನವಿಯ ಮೇರೆಗೆ ಮತ್ತೆ ಮೊಕದ್ದಮೆಯನ್ನು ಸುನಾವಣೆಗೆ ತೆಗೆದುಕೊಳ್ಳಲಾಯಿತು ಹಾಗೂದಿನಾಂಕ: 09.04.2018 ರಂದು ವಾದಗಳಿಗಾಗಿ ಮುಂದೂಡಲಾಯಿತು.ಸುನಾವಣೆಯನ್ನು ನಡೆಸಿದ ನಂತರ, ಅದನ್ನು ಮತ್ತೆ ತೀರ್ಪಿಗಾಗಿ ಕಾಯ್ದಿರಿಸಲಾಯಿತು.ದೀರ್ಘ ಅಂತರದ ನಂತರ ತೀರ್ಪನ್ನು ದಿನಾಂಕ 10-12-2018ರಂದು ಘೋಷಿಸಲಾಗಿತ್ತು.ತೀರ್ಪನ್ನು ಘೋಷಿಸುವಲ್ಲಿ ಆದ ವಿಳಂಬ ಹಾಗೂ ವಾದಗಳ ಮುಕ್ತಾಯ ಮತ್ತು ತೀರ್ಪು ನೀಡಿಕೆಯ ನಡುವಿನ ಸುದೀರ್ಘ ವಿವರಿಸಲಾಗದ ಅಂತರವು ಸಾಮಾನ್ಯ ಜನರ ವಿಶ್ವಾಸವನ್ನು ಅಲುಗಾಡಿಸುತ್ತದೆ.ಅಷ್ಟೇ ಅಲ್ಲದೆ, ತೀರ್ಪಿನ ಘೋಷಣೆಗೆ ಶಾಸನದ ಉದ್ದೇಶವು ಅಧಿವಿಚಾರಣೆಯ ನಿರ್ಣಯದ ನಂತರ ಅಥವಾ ಯುಕ್ತ ಸಮಯದೊಳಗೆ ಕೂಡಲೇ ಘೋಷಿಸುವುದಾಗಬೇಕು ಎಂದು ಅವರು ನಿವೇದಿಸಿದ್ದಾರೆ.ದಂಡ ಪ್ರಕ್ರಿಯಾ ಸಂಹಿತೆಯ 353 ನೇ ಪ್ರಕರಣದ ಪ್ರಕಾರ, ತೀರ್ಪನ್ನು ವಿಳಂಬವಾಗಿ ಘೋಷಿಸುವುದು ಕಾನೂನಿನ ತತ್ವಗಳಿಗೆ ವಿರುದ್ಧವಾಗಿದೆ ಹಾಗೂ ಯಾವುದೇ ಸಂದರ್ಭದಲ್ಲೂ ಸಮಯವನ್ನು ಮೀರಿ ಮುಂದಕ್ಕೆ ಹಾಕುವಂತಿಲ್ಲ.ಅಷ್ಟೇ ಅಲ್ಲದೆ, ನಮ್ಮ ದೇಶದಲ್ಲಿ ಜನರು ನ್ಯಾಯಾಧೀಶರನ್ನು ದೇವರ ಎರಡನೇ ರೂಪ ಎಂದೇ ಪರಿಗಣಿಸುತ್ತಾರೆ.ಜನ ಸಾಮಾನ್ಯರ ನಂಬಿಕೆಯನ್ನು ಬಲಪಡಿಸುವ ಪ್ರಯತ್ನಗಳನ್ನು ಮಾಡಬೇಕಾಗಿದೆ.ಅಪೀಲು ನ್ಯಾಯಾಲಯವು, ಅನಿಲ್ ರಾಯ್ ಹಾಗೂ ಇತರರು ವಿರುದ್ಧ ಬಿಹಾರ ರಾಜ್ಯ 2 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ್ದ ಮಾರ್ಗಸೂಚಿಗಳನ್ನು ಅನುಸರಿಸದೆ, ತುಂಬಾ ತಡವಾಗಿ ಪ್ರಶ್ನಿತ ತೀರ್ಪನ್ನು ಹೊರಡಿಸಿದೆ.ಅವರು ಮುಂದುವರಿದು, ಮನುಷ್ಯನ ಜ್ಞಾಪಕ ಶಕ್ತಿ ಅಲ್ಪವಾಗಿರುವುದರಿಂದ ವಾದಗಳು ನಡೆಯುತ್ತಿರುವ ಅವಧಿಯಲ್ಲಿ ಮಂಡಿಸಲಾದ ಹಲವಾರು ಅಂಶಗಳು ಮರೆತುಹೋಗುತ್ತವೆ ಎಂದು ನಿವೇದಿಸಿದ್ದಾರೆ.ಹಲವಾರು ಅಂಶಗಳನ್ನು ಅಧಿವಿಚಾರಣಾ ನ್ಯಾಯಾಲಯಗಳು ಪರಿಗಣಿಸಿರುವುದಿಲ್ಲ.ಆಪಾದಿತನ ವಾದವನ್ನು ರುಜುವಾತುಪಡಿಸಲು ಹೆಚ್ಚುವರಿ ದಸ್ತಾವೇಜುಗಳನ್ನು ಚ ಹಾಜರುಪಡಿಸಲಾಗಿತ್ತು.ಆದರೆ, ಅಪೀಲು ನ್ಯಾಯಾಲಯವು ಪ್ರಶ್ನಿತ ತೀರ್ಪನ್ನು ಹೊರಡಿಸುವಾಗ, ಸದರಿ ದಸ್ತಾವೇಜುಗಳ ಬಗ್ಗೆ ಸಣ್ಣ ಮಾತನ್ನೂ ಆಡಿರುವುದಿಲ್ಲವೆಂದು ನಿವೇದಿಸಿದ್ದಾರೆ.ಮೊದಲಿಗೆ 1 ನೇ ಆಪಾದಿತ- ಕ ೦ ಪನಿಗೆ ನೋಟೀಸು ನೀಡುವುದು ಅವಿವೇಕತನದಿಂದ ಕೂಡಿದುದು ಎಂದು ಪರಿಗಣಿಸಿಲ್ಲ.ಆದರೆ ಇತ್ತೀಚಿನ ಹಿಮಾಂಶು ವಿರುದ್ಧ ಬಿ. ಶಿವಮೂರ್ತಿ ಮತ್ತು ಇನ್ನೊಬ್ಬರು (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಚ ತೀರ್ಪು ನಂತರ ನಿರ್ಣಯವಾಗಿದೆ ಮತ್ತು ಸಮಾನ ಪೀಠದ ನಿರ್ಣಯಗಳಲ್ಲಿ ಏನಾದರೂ ಸಂಘರ್ಷಗಳಿದ್ದರೆ ನಂತರದ ನಿರ್ಣಯವನ್ನು ಪಾಲಿಸಬೇಕಾಗುತ್ತದೆ ಎಂಬುದು ಕಾನೂನಿನ ಸುಸ್ಥಾಪಿತ ಪ್ರತಿಪಾದನೆಯಾಗಿದೆ.ಅಷ್ಟೇ ಅಲ್ಲದೆ, ದೂರುದಾರನು ಹಾಜರುಪಡಿಸಿದ ಇತ್ಯರ್ಥದ ಮೆಮೊ ನೋಂದಾಯಿತ ದಸ್ತಾವೇಜಾಗಿರುವುದಿಲ್ಲ.ಹಾಗೆಯೇ, ಆ ದಿನದಂದು ಇದ್ದಂತೆ ಜಾರಿಗೊಳಿಸ ಬಹುದಾದ ಸಾಲವಾಗಿರಲಿಲ್ಲವೆಂದು ಹಾಗೂ ಆ ಆಧಾರದ ಮೇಲೆ ಸಹ ದೂರನ್ನು ವಜಾಗೊಳಿಸಲು ಅರ್ಹವಾಗಿದೆಯೆಂದು ನಿಸ್ಸಂದೇಹವಾಗಿ ಅಭಿಪ್ರಾಯಪಡಬಹುದಾಗಿದೆ.

10. ಪರ್ಯಾಯವಾಗಿ, ಅರ್ಜಿದಾರ-ಆಪಾದಿತನ ವಾದವನ್ನು ರುಜುವಾತು ಪಡಿಸಲು ಹೆಚ್ಚುವರಿ ದಸ್ತಾವೇಜುಗಳನ್ನು ಪುನರ್ಪರಿಗಣಿಸುವ ಸಲುವಾಗಿ, ಮೊದಲ ಅಪೀಲು ನ್ಯಾಯಾಲಯಕ್ಕೆ ವಿಷಯವನ್ನು ಪುನರ್ವಿಚಾರಣೆಗಾಗಿ ಹಿಂದಕ್ಕೆ ಕಳುಹಿಸಬಹುದಾಗಿದೆಯೆಂದು ಅವರು ನಿವೇದಿಸಿದ್ದಾರೆ.ಈ ಆಧಾರಗಳ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪುಗಳನ್ನು ತಳ್ಳಿಹಾಕುವ ಮೂಲಕ ಅರ್ಜಿಯನ್ನು ಅಂಗೀಕರಿಸಬೇಕೆಂದು ಕೋರಿದ್ದಾರೆ.

11. ಇದಕ್ಕೆ ವಿರುದ್ಧವಾಗಿ ಎದುರುದಾರ-ದೂರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಬಲವಾಗಿ ವಾದಿಸುತ್ತಾ,ದಿನಾಂಕ: 12.08.2011 ರ ನಿಶಾನೆ-ಪಿ .17 ರಲ್ಲಿ 2 ನೇ ಆಪಾದಿತನಿಗೆ ನೋಟೀಸನ್ನು ಜಾರಿಗೊಳಿಸಲು ಅದರಲ್ಲಿ ವಿಳಾಸವನ್ನು ಸೂಚಿಸಿದ್ದು, ಅದರಲ್ಲಿ 2 ನೇ ಆಪಾದಿತನ ಹೆಸರನ್ನು ಮೆಸರ್ ಮಾಕ್ಸ್‌ವರ್ತ್ ರಿಯಾಲ್ಟಿ ಇಂಡಿಯಾ ಲಿಮಿಟೆಡ್ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರೆಂದು ಉದ್ದೇಶಪೂರ್ವಕವಾಗಿ ಸೂಚಿಸಲಾಗಿದೆಯೆಂದು ನಿವೇದಿಸಿದ್ದಾರೆ.ಚೆಕ್ಕಳಿಗೆ ಸಹಿ ಹಾಕಿರುವ ಕಂಪೆನಿಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟೀಸನ್ನು ಹೊರಡಿಸಿರುವುದು ಹಾಗೂ ಅವರ ಕಚೇರಿ ವಿಳಾಸಕ್ಕೆ ನೋಟೀಸನ್ನು ಹೊರಡಿಸಿರುವುದನ್ನು ನೋಡಿದರೆ, ನೋಟೀಸನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ಮಾತ್ರ ಕಳುಹಿಸದೆ ಕಂಪೆನಿಯು ಕಾನೂನು ಅಸ್ತಿತ್ವ ಹೊಂದಿರುವುದರಿಂದ ಅದಕ್ಕೂ ಸಹ ನೋಟೀಸನ್ನು ಕಳುಹಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ.ಈ ಬಗ್ಗೆ ಯಾವುದೇ ಅಸ್ಥಿರತೆ ಇರುವುದಿಲ್ಲ.ತನ್ನ ವಾದವನ್ನು ರುಜುವಾತುಪಡಿಸಲು ಅವರು, ಅಲಕ್ಚಂದ್ ಗ್ಯಾನಚಂದ್ ಕಂಪನಿ ವಿರುದ್ಧ- ಎ. ಚಿನ್ನಸ್ವಾಮಿ ಮೊಕದ್ದಮೆಯಲ್ಲಿನ ನಿರ್ಣಯಗಳನ್ನು ಮತ್ತು ರಜನೀಶ್ ಅಗರ್ವಾಲ್ ವಿರುದ್ಧ ಅಮಿತ್ ಜೆ. ಭಲ್ಲಾ* ಮೊಕದ್ದಮೆಯಲ್ಲಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ.ನಿಶಾನೆ-ಪಿ .20 ರಲ್ಲಿನ ಉತ್ತರದಲ್ಲೂ ಕೂಡ, ಶ್ರೀ ಕೇಶವ ಕೆ. ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮೆಸರ್ ಮ್ಯಾಕ್ಸ್‌ವರ್ತ್ ರಿಯಾಲ್ಟಿ ಇಂಡಿಯಾ ಲಿಮಿಟೆಡ್ ಇವರು ಉತ್ತರವನ್ನು ನೀಡುತ್ತಿದ್ದರೆಂಬುದನ್ನು ವಿಶೇಷವಾಗಿ ನಮೂದಿಸಲಾಗಿದ್ದು, ಇದು 2 ನೇ ಆಪಾದಿತನು ವೈಯಕ್ತಿಕವಾಗಿ ಹಾಗೂ 1 ನೇ ಆಪಾದಿತ-ಕಂಪನಿಯ ವ್ಯವಸ್ಥಾಪಕ ನಿರ್ದೇಶಕನಾಗಿ ನೋಟೀಸನ್ನು ಸ್ವೀಕರಿಸಿರುತ್ತಾನೆ.ಅವರು ಮುಂದುವರಿದು, ಹಿಮಾಂಶು -ವಿರುದ್ಧ- ಬಿ.ಶಿವಮೂರ್ತಿ ಮತ್ತು ಇನ್ನೊಬ್ಬರು (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ, ಕಂಪೆನಿಯನ್ನು ಪಕ್ಷಕಾರ ಅಥವಾ ಆಪಾದಿತನನ್ನಾಗಿ ಮಾಡಿಕೊಂಡಿರಲಿಲ್ಲವೆಂದು ನಿವೇದಿಸಿದ್ದಾರೆ.ಅಂಥ ಸನ್ನಿವೇಶಗಳಲ್ಲಿ ಕಂಪನಿಯನ್ನು ಆಪಾದಿತನೆಂದು ತೋರಿಸದೆ, ಮೊಕದ್ದಮೆಯನ್ನು ವ್ಯಕ್ತಿಗತನಾಗಿ ದಾಖಲಿಸಿರುವುದರಿಂದ ಮತ್ತು ಚೆಕ್ಕನ್ನು ವೈಯಕ್ತಿಕವಾಗಿ ನೀಡಲಾಗಿರುವುದರಿಂದ, ಕಂಪನಿಯ ವಿರುದ್ಧ ತಗಾದೆ ನೋಟೀಸನ್ನು ಹೊರಡಿಸಿಲ್ಲವೆಂಬ ನಿರ್ಣಯಕ್ಕೆ ಸರ್ವೋಚ್ಚ ನ್ಯಾಯಾಲಯವು ಬಂದಿರುತ್ತದೆ.ಈ ಹಿನ್ನೆಲೆಯಲ್ಲಿ ಸದರಿ ನಿರ್ಣಯವು, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾನೆ.ವರ್ಗಾವಣೀಯ ಲಿಖಿತಗಳ ಅಧಿನಿಯಮದ 94 ನೇ ಪ್ರಕರಣವನ್ನು ಅವಲಂಬಿಸುವ ಮೂಲಕ, ಅವರು ಇದು ಯಾವ ವಿಧಾನದಲ್ಲಿ ನೋಟೀಸನ್ನು ನೀಡಬಹುದು ಎಂಬುದನ್ನು ಗೊತ್ತುಪಡಿಸುತ್ತದೆಂದು ನಿವೇದಿಸಿದ್ದಾರೆ.ಸದರಿ ಮೊಕದ್ದಮೆಯ ಪ್ರಕಾರ, ಯಾರಿಗೆ ನೋಟೀಸನ್ನು ನೀಡಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ವ್ಯಕ್ತಿಯು ಯುಕ್ತವಾಗಿ ಅಧಿಕೃತಗೊಳಿಸಿದ ಏಜೆಂಟನಿಗೆ ನೀಡಬಹುದಾಗಿದೆ.ಈ ಹಿನ್ನೆಲೆಯಲ್ಲಿ, ದೂರುದಾರನು ವ್ಯಕ್ತಿಯ ಅಧಿಕೃತ ಏಜೆಂಟನಿಗೆ ಎಂದರೆ 2 ನೇ ಆಪಾದಿತನಿಗೆ ನೋಟೀಸನ್ನು ನೀಡಿರುವುದರಿಂದ ಸದರಿ ಉದ್ದೇಶವನ್ನು ಪೂರೈಸಲಾಗಿದೆ.ಅಷ್ಟೇ ಅಲ್ಲದೆ ಅವರು, ನಿಶಾನೆ.ಪಿ .7 ರಲ್ಲಿರುವ ವ್ಯವಸ್ಥಾಪತ್ರದಲ್ಲಿ, ಮೊತ್ತವು ಸಂದಾಯವಾಗಿರುವುದನ್ನು ಹಾಗೂ ಚೆಕ್ಕುಗಳ ಸಂಖ್ಯೆ ಇದೆಯೆಂದು ನಿವೇದಿಸಿದ್ದಾರೆ ಹಾಗೂ ಇತ್ಯರ್ಥದ ಪ್ರಕಾರ ಸದರಿ ಮೊತ್ತವನ್ನು ಸಂದಾಯ ಮಾಡಲಾಗಿದ್ದು, ಅದನ್ನು ಕಾನೂನುಬದ್ಧವಾಗಿ ವಸೂಲಿ ಮಾಡಬಹುದಾದ ಋಣವಾಗಿರುತ್ತದೆಯೆಂಬುದನ್ನು ತೋರಿಸುತ್ತದೆಯೆಂದು ನಿವೇದಿಸಿದ್ದಾರೆ.ಮುಂದುವರಿದು, ವ್ಯವಸ್ಥಾಪಕ ನಿರ್ದೇಶಕರು, ಕಂಪನಿಯ ಇತರ ಯಾರೇ ನಿರ್ದೇಶಕರುಗಳಿಗಿಂತ ಭಿನ್ನವಾದ ಹೆಜ್ಜೆಯನ್ನು ಇಟ್ಟಿರುವರೆಂದು ನಿವೇದಿಸಿದ್ದಾರೆ.ಅವರಿಗೆ ಕಂಪನಿಯ ವ್ಯವಹಾರಗಳ ಬಗ್ಗೆ ಗೊತ್ತಿತ್ತೆಂದು ಭಾವಿಸಲಾಗಿದ್ದು, ಅವರು ನೋಟೀಸನ್ನು ಜಾರಿ ಮಾಡಿರುವುದನ್ನು ನಿರಾಕರಿಸಲು ಸಾಧ್ಯವಿಲ್ಲ.ಅಷ್ಟೇ ಅಲ್ಲದೆ, ಅವರು ನಿಜವಾದ ಕಾನೂನು ಕ್ರಮಗಳನ್ನು ವಿಫಲಗೊಳಿಸುವಂಥ ಅಪ್ರಮಾಣಿಕನು ತಪ್ಪಿಸಿಕೊಳ್ಳಲು ಮತ್ತು ಪ್ರಾಮಾಣಿಕ ರೀತಿಯಲ್ಲಿ ಹಣ ಸಂದಾಯ ಮಾಡುವವನನ್ನು ಸಿಕ್ಕಿಸುವಂತಹ ಅರ್ಥವ್ಯಾಖ್ಯಾನಕ್ಕೆ ನ್ಯಾಯಾಲಯವು

ಅವಕಾಶಕೊಡಬಾರದೆಂದು ನಿವೇದಿಸಿಕೊಂಡಿದ್ದಾರೆ.ಸದರಿ ವಾದವನ್ನು ಸಮರ್ಥಿಸಿಕೊಳ್ಳಲು ಅವರು ವಿ. ರಾಜಕುಮಾರಿ -ವಿರುದ್ಧ-ಪಿ.ಸುಬ್ಬರಾಮ ನಾಯ್ಡು ಹಾಗೂ ಇನ್ನೊಬ್ಬರು ಪ್ರಕರಣದಲ್ಲಿನ ನಿರ್ಣಯವನ್ನು ಅವಲಂಬಿಸಿದ್ದಾರೆ. ಮುಂದುವರಿದು ಅವರು, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯವು, ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಗಣಿಸಿ ಸರಿಯಾದ ನಿರ್ಣಯಕ್ಕೆ ಬಂದಿರುತ್ತವೆಯೆಂದು ನಿವೇದಿಸಿದ್ದಾರೆ.ಅರ್ಜಿದಾರರ ಪರ ಹಾಜರಾಗಿರುವ ಮಾನ್ಯ ವಕೀಲರು ಅಧಿವಿಚಾರಣಾ ನ್ಯಾಯಾಲಯದ ತೀರ್ಪುಗಳಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಒಳ್ಳೆಯ ಆಧಾರವನ್ನು ನೀಡಿರುವುದಿಲ್ಲ.ವಿಷಯವನ್ನು ಪುನರ್ ವಿಚಾರಣೆ ಮಾಡಲು ಹಿಂದಕ್ಕೆ ಕಳುಹಿಸಿದರೆ, ವ್ಯವಹರಣೆಗಳನ್ನು ಲಂಬಿಸಿ ಅಪ್ರಮಾಣಿಕನು ತಪ್ಪಿಸಿಕೊಳ್ಳಲು ಸಹಾಯ ಮಾಡಿದಂತಾಗುತ್ತದೆ.ಈ ಆಧಾರಗಳ ಮೇಲೆ ಈ ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾರೆ.

12. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ನಿವೇದನೆಗಳನ್ನು ನಾನು ಎಚ್ಚರಿಕೆಯಿಂದ ಹಾಗೂ ಜಾಗರೂಕತೆಯಿಂದ ಪರಿಶೀಲಿಸಿದ್ದು, ಅವರು ಉಲ್ಲೇಖಿಸಿದ ದಾಖಲೆಗಳು ಹಾಗೂ ನಿರ್ಣಯಗಳನ್ನು ಅವಗಾಹಿಸಿರುತ್ತೇನೆ.

13. ಅರ್ಜಿದಾರರು-ಆಪಾದಿತರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ಮೊದಲ ಹಾಗೂ ಅತಿಮುಖ್ಯ ವಾದವೇನೆಂದರೆ, ಆಪಾದಿತನಿಗೆ ನೋಟೀಸನ್ನು ಜಾರಿ ಮಾಡಬೇಕಾಗಿತ್ತು ಹಾಗೂ ಸದರಿ ಮೊಕದ್ದಮೆಯಲ್ಲಿ 1 ನೇ ಆಪಾದಿತ-ಕಂಪನಿಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಎಂಬುದಾಗಿದೆ.1 ನೇ ಆಪಾದಿತ-ಕಂಪನಿಗೆ ನೋಟೀಸನ್ನು ಜಾರಿ ಮಾಡದೆ ಇದ್ದದ್ದರಿಂದ ಯಾವುದೇ ತಗಾದೆಯಿರುವುದಿಲ್ಲ, ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಹಾಗೂ ವ್ಯವಹರಣೆಗಳನ್ನು ಪ್ರಾರಂಭಿಸಲಾಗುವುದಿಲ್ಲ.ಹಾಗಾಗಿ ಇದು ಸಂಪೂರ್ಣ ವ್ಯವಹರಣೆಗಳನ್ನು ನಿರರ್ಥಕಗೊಳಿಸುತ್ತದೆ.ಅವರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಹಿಮಾಂಶು ವಿರುದ್ಧ ಬಿ. ಶಿವಮೂರ್ತಿ ಹಾಗೂ ಇನ್ನೊಬ್ಬರು ಮೊಕದ್ದಮೆಯಲ್ಲಿ (ಮೇಲೆ ಹೇಳಲಾದ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಚ ನಿರ್ಣಯವನ್ನು ಅವಲಂಬಿಸಿದ್ದು, ಇದರಲ್ಲಿ 6, 7 9, 11 ಹಾಗೂ 13 ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"6, ಉಚ್ಚ ನ್ಯಾಯಾಲಯದ ತೀರ್ಪನ್ನು ಎರಡು ಆಧಾರಗಳ ಚ ಮೇಲೆ ಪ್ರಶ್ನಿಸಲಾಗಿದೆ.ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಮೊದಲನೆಯದಾಗಿ, ಕ ೦ ಪನಿಯನ್ನು ಆಪಾದಿತನೆಂದು ಹೆಸರಿಸದೆ ಅಪೀಲುದಾರನನ್ನು ವಿಚಾರಣೆಗೆ ಗುರಿಪಡಿಸುವಂತಿಲ್ಲ.ಚೆಕ್ಕನ್ನು ಕಂಪನಿಯು ನೀಡಿದ್ದು, ಅದರ ನಿರ್ದೇಶಕನಾಗಿ ಅಪೀಲುದಾರನು ಸಹಿ ಮಾಡಿರುತ್ತಾನೆ.ಎರಡನೆಯದಾಗಿ, ಕಂಪನಿಯು ದೂರುದಾರನ ವಿರುದ್ಧ ಕ್ರಮ ಜರುಗಿಸಬಹುದಾಗಿತ್ತು ಎ ೦ ಬ ಉಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ತಪ್ಪಾಗಿ ಗ್ರಹಿಸಿದೆಯೆಂಬುದಾಗಿ ಆಗ್ರಹಿಸಿದ್ದಾರೆ.ಮಾನ್ಯ ವಕೀಲರು, 138 ನೇ ಪ್ರಕರಣದ ಮೇರೆಗಿನ ಅಪರಾಧವು, ತಗಾದೆ ನೋಟೀಸನ್ನು ಹೊರಡಿಸುವುದರ ಮೇಲೆ ಹಾಗೂ ಗೊತ್ತುಪಡಿಸಿದ ಅವಧಿಯೊಳಗೆ ಸಂದಾಯ ಮಾಡುವಲ್ಲಿ ಆದ ವಿಫಲತೆಯ ಬಗ್ಗೆ ಮಾತ್ರ ನಿಂತಿದೆಯೆಂದು ನಿವೇದಿಸಿದ್ದಾರೆ.138 ನೇ ಪ್ರಕರಣದ ಅಗತ್ಯತೆಗಳನ್ನು ಪಾಲಿಸದೇ ಇರುವುದರಿಂದಾಗಿ ಈ ಹಂತದಲ್ಲಿ ಪಕ್ಷಕಾರನನ್ನಾಗಿ ಸೇರಿಸುವುದು/ದೋಷಾರೋಪಣೆ ಮಾಡುವುದು ದೋಷಯುಕವಾದುದಾಗಿದೆ ೦ ಬ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ಪ್ರತಿಪಾದಿಸಲಾಗಿದೆ.

7. ಅಪೀಲುದಾರನ ಪರವಾದ ಮೊದಲನೇ ನಿವೇದನೆಯು ಅನಿರ್ಣೀತ ವಿಷಯವಾಗಿ ಹೆಚ್ಚು ಕಾಲ ಉಳಿಯುವುದಿಲ್ಲ.ಅನೀತ ಹಾಡ -ವಿರುದ್ಧ-ಗಾಡ್ ಫಾದರ್ ಟ್ರಾವೆಲ್ಸ್ ಅಂಡ್ ಟೂರ್ (ಪ್ರೈ) ಲಿಮಿಟೆಡ್, [ (2012) 5 ಎಸ್ಸಿಸಿ 661:(2012) 3 ಎಸ್ಸಿಸಿ (ಸಿವಿಲ್) 350; (2012) 3 ಎಸ್ಸಿ (ಕ್ರಿಮಿನಲ್) 241)] ಮೊಕದ್ದಮೆಗಳಲ್ಲಿನ ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠದ ಒಂದು ನಿರ್ಣಯವು ವಿವಾದದ ಭಾಗವನ್ನು ನಿರ್ಣಯಿಸುತ್ತವೆ.ಕಂಪನಿಯನ್ನು ಆಪಾದಿತನೆಂದು ದೋಷಾರೋಪ

ಮಾಡದೆ, ಕಂಪನಿಯ ಒಬ್ಬ ಅಧಿಕೃತ ಸಹಿದಾರನು ವರ್ಗಾವಣೀಯ ಲಿಖಿತಗಳ ಬ ಅಧಿನಿಯಮ, 1881 ರ 138 ನೇ ಪ್ರಕರಣದ ಮೇರೆಗೆ ಕಾನೂನು ಕ್ರಮ ನಡೆಸಲು ಜವಾಬ್ದಾರರಾಗುವರೇ ಎಂಬುದು ಪರಿಗಣನೆಯ ವಿಷಯವಾಗಿದೆ.

ಮೂವರು ನ್ಯಾಯಾಧೀಶರ ಪೀಠವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:(ಎಸ್ಸಿಸಿ ಪಿ 688 ಕಂಡಿಕೆ 58).

"58. ಕರಾರುವಾಕ್ಕಾಗಿ ರಚಿತವಾದ ಸಿದ್ಧಾಂತವನ್ನು ಅನ್ವಯಿಸಿ, ನಾವು, ಕಂಪನಿಯು ಅಪರಾಧ ಮಾಡಿರುವುದನ್ನು ಇತರರ ಪ್ರತಿನಿಧಿ ರೂಪದ ಹೊಣೆಗಾರಿಕೆಯನ್ನು ಅನ್ವಯಿಸಲು ಸ್ಪಷ್ಟವಾದ ಪೂರ್ವನಿದರ್ಶನವಾಗಿದೆ ಎ ಂ ಬ ಪರಿಗಣಿತ ಅಭಿಪ್ರಾಯಕ್ಕೆ ಬಂದಿರುತ್ತವೆ.ಹೀಗಾಗಿ ಪ್ರಕರಣದಲ್ಲಿ ಕಂಡುಬರುವ " ಹಾಗೂ ಕ ಂ ಪನಿ " ಎಂಬ ಪದಗಳು, ಕಂಪನಿಯ ಮೇಲೆ ಕಾನೂನು ಕ್ರಮವನ್ನು ಜರುಗಿಸಿದಾಗ ಮಾತ್ರ ಇತರ ಪವರ್ಗಗಳಲ್ಲಿ ಸೂಚಿಸಲಾದ ವ್ಯಕ್ತಿಗಳು ಅರ್ಜಿಯಲ್ಲಿನ ದೃಢಕ್ತಿಗಳಿಗೆ ಹಾಗೂ ಅದರ ರುಜುವಾತಿಗೆ ಒಳಪಟ್ಟು ಅಪರಾಧಕ್ಕೆ ಸಂಬಂಧಿಸಿದ್ದಂತೆ ಪ್ರತಿನಿಧಿ ರೂಪವಾಗಿ ಜವಾಬ್ದಾರರಾಗುತ್ತಾರೆ ಎಂಬುದನ್ನು ನಿಸ್ಸಂದೇಹಾಸ್ಪದವಾಗಿ ಸ್ಪಷ್ಟಪಡಿಸುತ್ತವೆ.ಕಂಪನಿಯು ನ್ಯಾಯಜಾತ ವ್ಯಕ್ತಿಯಾಗಿದ್ದು, ಅದು ತನ್ನದೇ ಆದ ಗೌರವವನ್ನು ಹೊಂದಿದೆ ಎಂಬ ಅಂಶವನ್ನು ಮರೆತುಬಿಡಲಾಗುವುದಿಲ್ಲ.ಅದರ ವಿರುದ್ಧ ಒಂದು ನಿರ್ಣಯವನ್ನು ದಾಖಲಿಸಿದರೆ, ಅದು ಅದರ ಘನತೆಗೆ ಕುಂದು ತರುತ್ತದೆ.ನಿರ್ದೇಶಕರನ್ನು ಸೂಚಿಸಿದಾಗ ಕಾರ್ಪೊರೇಟ್ ಘನತೆಗೆ ಧಕ್ಕೆಯಾದ ಸಂದರ್ಭಗಳು ಇರಬಹುದು."

ಇದೇ ರೀತಿಯ ಸಂದರ್ಭಗಳಲ್ಲಿ, ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:(ಎಸ್ಸಿ ಪಿ .688 ಕಂಡಿಕೆ 59)

"59. ಹಿಂದಿನ ನಮ್ಮ ವಿಶ್ಲೇಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧಿನಿಯಮದ 141 ನೇ ಪ್ರಕರಣದ ಮೇರೆಗೆ ಕ್ರಮ ಜರುಗಿಸುವುದಕ್ಕಾಗಿ ಒ ಂ ದು ಕ ಂ ಪನಿಯನ್ನು ಆಪಾದಿತನೆಂದು ಬಿಂಬಿಸುವುದು ಅನಿವಾರ್ಯವಾಗಿದೆಯೆಂಬ ದೃಢ ನಿರ್ಣಯಕ್ಕೆ ನಾವು ಬಂದಿರುತ್ತೇವೆ.ಇದ ನ ಸ್ವತಃ ಇದ್ ಉಪ ಬ ಂ ಧದಲ್ಲಿಂ ಗೊತ್ತುಪಡಿಸಲಾಗಿರುವುದರಿ ಂ ದ, ಇನ್ನಿತರ ಪ್ರವರ್ಗದ ಅಪರಾಧಿಗಳನ್ನು, ಪ್ರತಿನಿಧಿರೂಪ ಜವಾಬ್ದಾರಿಯ ಮಾನದಂಡದ ಮೇಲೆ ಎಳೆದು ತರಬಹುದಾಗಿದೆ.

8. XXXX XXXX XXXX

9. XXXX XXXX XXXX

10. XXXX XXXX XXXX

11. ಪ್ರಸ್ತುತ ಮೊಕದ್ದಮೆಯಲ್ಲಿ, ನ್ಯಾಯಾಲಯದ ಮುಂದಿರುವ ದಾಖಲೆಯು, ಅಪೀಲುದಾರನು ಲಕಿ ಸಿಮೆಂಟ್ ಎ್ರ ಅಂಡ್ ಸಿರಾಮಿಕ್ಸ್ ಇಂಡಸ್ಟ್ರೀಸ್ ಲಿಮಿಟೆಡ್ನ ನಿರ್ದೇಶಕನಾಗಿ ಚೆಕ್ಕನ್ನು ಪಡೆದಿರುವನೆ ಂ ಬುದನ್ನು ಸೂಚಿಸುತ್ತದೆ.ತಗಾದೆ ನೋಟೀಸನ್ನು ಅಪೀಲುದಾರನಿಗೆ ಮಾತ್ರ ನೀಡಲಾಗಿದೆ.ಕ ಂ ಪನಿಯನ್ನು ಅಪರಾಧಿಯೆಂದು ದೋಷಾರೋಪ ಮಾಡದೇ ಅಪೀಲುದಾರನ ವಿರುದ್ಧ ಮಾತ್ರ ದೂರನ್ನು ದಾಖಲಿಸಲಾಗಿದೆ.

12.

XXXXX

XXXXX

XXXXX

13. ಆದ್ದರಿಂದ, ಕ ೦ ಪನಿಯನ್ನು ಆಪಾದಿತನೆ ೦ ದು ದೋಷಾರೋಪ ಮಾಡದೆ, ಅಪೀಲುದಾರನ ವಿರುದ್ಧ ದೂರನ್ನು ದಾಖಲಿಸಿರುವುದು ಸಮರ್ಥನೀಯವಾಗಿಲ್ಲ.ಅಪೀಲುದಾರನು ಕಂಪನಿಯ ನಿರ್ದೇಶಕನಾಗಿ ಮತ್ತು ಕಂಪನಿಯ ಪರವಾಗಿ ಹಾಗೂ ಅದರ ಹೆಸರಿನಲ್ಲಿ ಚೆಕ್ಕಿಗೆ ಸಹಿ ಮಾಡಿರುತ್ತಾನೆ.ಅಷ್ಟೇ ಅಲ್ಲದೆ, ಕಂಪನಿಗೆ ತಗಾದೆ ನೋಟೀಸು ಜಾರಿಮಾಡದೆ, 138 ನೇ ಪ್ರಕರಣದ ಪರಂತುಕವನ್ನು ಪಾಲಿಸದೆ, ಉಚ್ಚ ನ್ಯಾಯಾಲಯವು ಈಗ ಚ ಕಂಪನಿಯನ್ನು ಆಪಾದಿತನೆಂದು ದೋಷಾರೋಪ ಹೊರಿಸಬಹುದೆಂದು ಅಭಿಪ್ರಾಯಪಟ್ಟಿರುವುದು ದೋಷಯುಕ್ತವಾಗಿದೆ."

14. ನಿಶಾನೆ, ಪಿ .17 ರಲ್ಲಿನ ನೋಟೀಸಿನಲ್ಲಿ ಕಂಡುಬಂದಿರುವಂತೆ, ಮೆಸರ್ ಮಾಕ್ಸ್ವರ್ತ್ ರಿಯಾಲ್ಟಿ ಇಂಡಿಯಾ ಲಿಮಿಟೆಡ್ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನೆಂದು 2 ನೇ ಆಪಾದಿತನಿಗೆ ನೋಟೀಸು ಜಾರಿ ಮಾಡಲಾಗಿದೆ.ನಿಶಾನೆ ಪಿ .20 ರಲ್ಲಿ ನೀಡಲಾದ ಪ್ರತ್ಯುತ್ತರವೂ ಕೂಡ, ಇದೇ ವಿಳಾಸವನ್ನು ಒಳಗೊಂಡಿರುತ್ತದೆ.ಅರ್ಜಿದಾರರು-ಆಪಾದಿತರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರೂ ಸಹ ವರ್ಗಾವಣೀಯ ಲಿಖಿತಗಳ ಅಧಿನಿಯಮದ 141 ನೇ ಪ್ರಕರಣವನ್ನು ಅವಲಂಬಿಸಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

"141. ಕಂಪನಿಗಳಿಂದ ಅಪರಾಧಗಳು .- ( 1) 138 ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಸಮಯದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಸಂಬಂಧದಲ್ಲಿ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರ ೦ ತು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆ ವಹಿಸಿದ್ದೆನೆಂದು ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪ-ಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

ಮತ್ತೂ ಪರಂತು, ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಮಾಲೀಕತ್ವ ಅಥವಾ ನಿಯಂತ್ರಣ ಹೊಂದಿದ ಹಣಕಾಸು ನಿಗಮದಲ್ಲಿ ಯಾವುದೇ ಹುದ್ದೆ ಅಥವಾ ನಿಯೋಜನೆಯನ್ನು ಹೊಂದಿರುವ ಕಾರಣದಿಂದ ಒಬ್ಬ ವ್ಯಕ್ತಿಯು ಒಂದು ಕಂಪನಿಯ ನಿರ್ದೇಶಕನಾಗಿ ನಾಮನಿರ್ದೇಶಿತನಾಗಿದ್ದಲ್ಲಿ ಈ ಅಧ್ಯಾಯದ ಮೇರೆಗೆ ಆತನು ಪ್ರಾಸಿಕ್ಯೂಷನ್ಗೆ ಗುರಿಯಾಗತಕ್ಕದ್ದಲ್ಲ.

(2) (1) ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿ ೦ ದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿದೆ ಎಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,

( ಎ) " ಕಂಪನಿ " ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ ನಿರ್ದೇಶಕ " ಎಂದರೆ, ಫರ್ಮಿನ ಒಬ್ಬ ಪಾಲುದಾರ."

15. ಸದರಿ ಪ್ರಕರಣವನ್ನು ಸೂಕ್ಷ್ಮವಾಗಿ ಓದಿದ ನಂತರ, 138 ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವ ವ್ಯಕ್ತಿಯು ಕಂಪನಿಯಾಗಿದ್ದರೆ, ಅಪರಾಧ ನಡೆದ ಸಮಯದಲ್ಲಿ ಪ್ರಭಾರ ಹೊಂದಿದ್ದ ಹಾಗೂ ಕಂಪನಿಯ ವ್ಯವಹಾರಗಳನ್ನು ನಡೆಸಲು ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಸಹ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.ಪ್ರಾತಿನಿಧಿಕ ಜವಾಬ್ದಾರಿಯನ್ನು ಸೃಜಿಸಿರುವುದಕ್ಕೆ ಕಾರಣ ಸ್ಪಷ್ಟವಾಗಿ ನ್ಯಾಯಿಕ ಅಸ್ತಿತ್ವ ಹೊಂದಿರುವ ಎಂದರೆ ಕಂಪನಿಯನ್ನು ಇದರ ವ್ಯವಹಾರಗಳ ಪ್ರಭಾರ ಹೊಂದಿರುವ ಹಾಗೂ ಆ ಕಂಪನಿಯ ಕಾರ್ಯಗಳಿಗೆ ಮಾರ್ಗದರ್ಶನ ನೀಡುವ ವ್ಯಕ್ತಿಗಳು ನಡೆಸುತ್ತಿದ್ದರೆಂಬುದಾಗಿದೆ ಹಾಗೂ ಅಂಥ ನ್ಯಾಯಿಕ ಅಸ್ತಿತ್ವದಿಂದ ಅಪರಾಧದ ತಪ್ಪಿತಸ್ಥನಾದರೆ, ಅಂತಿಮವಾಗಿ, ಅದರ ವ್ಯವಹಾರಗಳಿಗೆ ಜವಾಬ್ದಾರರಾಗಿರುವ ವ್ಯಕ್ತಿಗಳು ತಪ್ಪಿತಸ್ಥರೆಂದಾಗುತ್ತದೆ ಹಾಗೂ ಅವರನ್ನು ಜವಾಬ್ದಾರರನ್ನಾಗಿ ಮಾಡಿ ಅಪರಾಧ ನಿರ್ಣಯ ಮಾಡಬೇಕಾಗುತ್ತದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕೃಷ್ಣ ಟೆಕ್ಸ್ಪೋರ್ಟ್ ಹಾಗೂ ಕ್ಯಾಪಿಟಲ್ ಮಾರ್ಕೆಟ್ಸ್ ಅಮಿಟೆಡ್ -ವಿರುದ್ಧ ಇಲಾ ಎ. ಅಗರ್ವಾಲ್ ಹಾಗೂ ಇತರರು ಮೊಕದ್ದಮೆಯಲ್ಲಿ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 141 ನೇ ಪ್ರಕರಣವು, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ ಅಂಥ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ನೋಟೀಸನ್ನು ನೀಡಬೇಕಾಗುತ್ತದೆ ಎಂಬ ಬಗ್ಗೆ ಯಾವುದೇ ಅಗತ್ಯತೆಯನ್ನು ವಿಧಿಸಿಲ್ಲದಿರುವುದರಿಂದ, ಕಂಪನಿಯ ನಿರ್ದೇಶಕರುಗಳಿಗೆ ಪ್ರತ್ಯೇಕ ನೋಟೀಸುಗಳನ್ನು ಕಳುಹಿಸುವ ಅಗತ್ಯವಿರುವುದಿಲ್ಲ.ಏಕೆಂದರೆ, ಕಂಪನಿಯ ವ್ಯವಹಾರಗಳ ಚುಕ್ಕಾಣಿ ಹಿಡಿದಿರುವ ವ್ಯಕ್ತಿಗಳಿಗೆ ಸಹಜವಾಗಿಯೇ ಅಂಥ ಕಂಪನಿಗೆ ತಗಾದೆ ನೋಟೀಸು ನೀಡಿರುವ ಬಗ್ಗೆ ಅರಿವಿರುತ್ತದೆಯೆಂಬ ನಿರ್ಣಯಕ್ಕೆ ಬಂದಿರುತ್ತದೆ.ಈ ಬಗ್ಗೆ ಸದರಿ ಲೋಪಗಳನ್ನು ಸರಿಪಡಿಸಬಹುದಾಗಿದೆ.ಹಿಂದೆ ಹೇಳಲಾದ ನಿರ್ಣಯದ ಕಂಡಿಕೆ -16 ರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"16. 141 ನೇ ಪ್ರಕರಣವು, 138 ನೇ ಪ್ರಕರಣದ ಅಡಿಯಲ್ಲಿ ಅಪರಾಧ ಎಸಗಿದ ವ್ಯಕ್ತಿಯು ಕಂಪನಿಯಾಗಿದ್ದರೆ, ಅದರ ವ್ಯವಹರಣೆ ನಡೆಸುವುದಕ್ಕಾಗಿ ಆ ಕಂಪನಿಯ ಪ್ರಭಾರಿಯಾಗಿದ್ದ ಅಥವಾ ಅದಕ್ಕೆ ಹೊಣೆಗಾರನಾಗಿದ್ದ ಅಂಥ ಕಂಪನಿಯ ಪ್ರತಿಯೊಬ್ಬ ನಿರ್ದೇಶಕನನ್ನು ಸಹ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಎಂದು ಹೇಳುತ್ತದೆ.ಕೇವಲ ಪ್ರಾತಿನಿಧಿಕ ಹೊಣೆಗಾರಿಕೆಯನ್ನು ಸೃಜಿಸುವುದಕ್ಕೆ ಕಾರಣವೆಂದರೆ ನ್ಯಾಯಿಕ ಅಸ್ತಿತ್ವ ಎಂದರೆ, ಒಂದು ಕಂಪನಿಯ ವ್ಯವಹಾರಗಳ ಪ್ರಭಾರ ಹೊಂದಿರುವ ಮತ್ತು ಆ ಕಂಪನಿಯ ಕಾರ್ಯಗಳಿಗೆ ಮಾರ್ಗದರ್ಶನ ಮಾಡುವ ಜೀವಂತ ವ್ಯಕ್ತಿಗಳು ಅದನ್ನು ನಡೆಸುತ್ತಾರೆ ಎಂಬುದಾಗಿದೆ ಹಾಗೂ ಅಂಥ ನ್ಯಾಯಿಕ ಅಸ್ತಿತ್ವವು ತಪ್ಪಿತಸ್ಥನಾಗಿದ್ದರೆ, ಅದಕ್ಕೆ ಹಾಗೆ ಹೊಣೆಗಾರರಾಗು ವಂಥವರನ್ನು ಮತ್ತು ಅಂಥ ನ್ಯಾಯಿಕ ಅಸ್ತಿತ್ವದ ಕಾರ್ಯಗಳಿಗೆ ಮಾರ್ಗದರ್ಶಕರಾಗಿರುವಂಥವರನ್ನು ಹೊಣೆಗಾರರನ್ನಾಗಿಸತಕ್ಕದ್ದು ಮತ್ತು ಅವರ ವಿರುದ್ಧ ವ್ಯವಹರಣೆ ಜರುಗಿಸಬೇಕಾಗುವುದು.ಅಲ್ಲದೆ, ಅಂಥ ಸಂದರ್ಭದಲ್ಲಿ, 138 ನೇ ಪ್ರಕರಣದ ಮೇರೆಗೆ ನಿರ್ದೇಶಕರಿಗೆ ಪ್ರತ್ಯೇಕ ನೋಟೀಸುಗಳನ್ನು ಪ್ರತಿಯೊಬ್ಬರಿಗೂ ನೀಡಬೇಕೆಂಬ ಯಾವುದೇ ಅಗತ್ಯತೆಯನ್ನು 141 ನೇ ಪ್ರಕರಣವು, ವಿಧಿಸಿರುವುದಿಲ್ಲ.ಕಂಪನಿಯ ವ್ಯವಹರಣೆಗಳ ಪ್ರಭಾರಿಯಾಗಿರುವ ಮತ್ತು ಅದರ ವ್ಯವಹರಣೆಗಳನ್ನು ನಡೆಸುತ್ತಿರುವ ವ್ಯಕ್ತಿಗಳು ಸಹಜವಾಗಿಯೇ ಅಂಥ ಕಂಪನಿಗೆ ನೀಡಲಾಗುವ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ ತಗಾದೆ ನೋಟೀಸಿನ ಬಗ್ಗೆ ತಿಳಿದಿರಬೇಕು.ನಿಖರವಾಗಿ ಈ ಕಾರಣಕ್ಕಾಗಿಯೇ ಅಂಥ ನಿರ್ದೇಶಕರಿಗೆ ಯಾವುದೇ ನೋಟೀಸನ್ನು ನೀಡಬೇಕೆಂದು ಹೆಚ್ಚುವರಿಯಾಗಿ ಪರ್ಯಾಲೋಚಿಸಿರುವುದಿಲ್ಲ." ಹಣ ಪಡೆಯುವ " ಕಂಪನಿಗೆ ಇರುವ ಅವಕಾಶವನ್ನು ಅಂಥ ಕ ಂ ಪನಿಯ ವ್ಯವಹರಣೆಗಳ

ಪ್ರಭಾರಿಯಾಗಿರುವಂಥವರಿಗೆ ಪರ್ಯಾಪ್ತವಾಗಿ ಪರಿಗಣಿಸಲಾಗಿದೆ.ಅಪರಾಧವನ್ನು ಅವರ ಅರಿವಿಗೆ ಬರದೆ ಎಸಗಲಾಗಿತ್ತು ಅಥವಾ ಅಂಥ ಅಪರಾಧ ಎಸಗುವುದನ್ನು ತಡೆಯಲು ಯುಕ್ತ ವಿವೇಚನೆಯನ್ನು ಅವರು ಚಲಾಯಿಸಿದ್ದರು ಎಂಬುದು ಅವರ ವಾದವಾಗಿದ್ದರೆ, ಅದು, ವಿಚಾರಣೆಯ ಸೂಕ್ತ ಹಂತದಲ್ಲಿ ಪರಿಗಣಿಸಬೇಕಾದ ಪ್ರತಿವಾದದ ವಿಷಯವಾಗಿರುತ್ತದೆಯೇ ಹೊರತು, 138 ನೇ ಪ್ರಕರಣದ ಮೇರೆಗೆ ನೋಟೀಸು ನೀಡುವ ಹಂತದಲ್ಲಿ ಖಂಡಿತವಾಗಿಯೂ ಅಲ್ಲ. "

16. ಹಿಂದೆ ಹೇಳಲಾದ ಪ್ರಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ನ್ಯಾಯಿಕ ಅಸ್ತಿತ್ವ ಹೊಂದಿರುವ ಕಂಪನಿಯು, ಮನುಷ್ಯನಂತೆ ತಿಳಿವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ.ವಾಸ್ತವವಾಗಿ, ಕಂಪನಿಯ ತಿಳಿವಳಿಕೆ ಎಂದರೆ ಅಂಥ ಕಂಪನಿಯ ನಿಯಂತ್ರಣವನ್ನು ಹೊಂದಿರುವ ಜನರ ತಿಳಿವಳಿಕೆ ಎಂದರ್ಥ.ಸಾಮಾನ್ಯವಾಗಿ, ತಿಳಿವಳಿಕೆಯನ್ನು ಹೊಂದಿರುವ ಕಂಪನಿಯ ಅಧ್ಯಕ್ಷ ಅಥವಾ ವ್ಯವಸ್ಥಾಪಕ ನಿರ್ದೇಶಕರಾಗಿರುತ್ತಾರೆ.ಕಂಪನಿಗಳ ಅಧಿನಿಯಮ, 2013 ರ 2 (54) ನೇ ಪ್ರಕರಣವು, ವ್ಯವಸ್ಥಾಪಕ ನಿರ್ದೇಶಕರು ಎಂಬ ಬಗ್ಗೆ ಹೀಗೆ ಪರಿಭಾಷಿಸುತ್ತದೆ:" ವ್ಯವಸ್ಥಾಪಕ ನಿರ್ದೇಶಕರು " ಎಂದರೆ, ನಿರ್ದೇಶಕರು.ಇವರಿಗೆ ಕಂಪನಿಯ ಅನುಚ್ಛೇದದ ಮೂಲಕ ಅಥವಾ ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದ ಅಥವಾ ತನ್ನ ಸಾಮಾನ್ಯ ಸಭೆಯಲ್ಲಿ ಹೊರಡಿಸಿದ ನಿರ್ಣಯಗಳ ಮೂಲಕ ಅಥವಾ ತನ್ನ ನಿರ್ದೇಶಕರುಗಳ ಮಂಡಳಿಯ ಮೂಲಕ, ಕಂಪನಿಯ ವ್ಯವಹಾರಗಳ ನಿರ್ವಹಣೆಗಾಗಿ ಗಮನಾರ್ಹ ಪ್ರಮಾಣದ ಅಧಿಕಾರಗಳನ್ನು ವಹಿಸಲಾಗಿರುವ ವ್ಯಕ್ತಿಯ ಹಾಗೂ ಯಾವುದೇ ಹೆಸರಿನಿಂದ ಕರೆಯಲಿ, ಆ ವ್ಯವಸ್ಥಾಪಕ ನಿರ್ದೇಶಕರ ಸ್ಥಾನವನ್ನು ಅಲಂಕರಿಸಿರುವ ನಿರ್ದೇಶಕನನ್ನು ಸಹ ಅದು ಒಳಗೊಳ್ಳುತ್ತದೆ.

17. ಪರಿಭಾಷೆಯ ಪ್ರಕಾರ, ವ್ಯವಸ್ಥಾಪಕ ನಿರ್ದೇಶಕರು, ಕಂಪನಿಯ ವ್ಯವಹಾರಗಳ ನಿರ್ವಹಣೆಗಾಗಿ ಗಣನೀಯ ಪ್ರಮಾಣದ ಅಧಿಕಾರವನ್ನು ವಹಿಸಿಕೊಡಲಾಗಿರುವ ವ್ಯಕ್ತಿಯಾಗಿರುತ್ತಾರೆ.ಹಾಗಾಗಿ, ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದ ನೋಟೀಸಿನಿಂದ ಕಂಪನಿಗೂ ಸಹ ಚೆಕ್ಕು ಅಮಾನೀಕರಣದ ಬಗ್ಗೆ ಹಾಗೂ ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂಥ ಅಮಾನ್ಯಗೊಂಡ ಚೆಕ್ಕು ಸಂದಾಯದ ಬಗ್ಗೆ ತಗಾದೆ ಮಾಡಿರುವ ಬಗ್ಗೆಯೂ ತಿಳಿವಳಿಕೆಯಿರುತ್ತದೆ.ಅರ್ಜಿದಾರರ-ಆಪಾದಿತರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಿಮಾಂಶು- ಚ ವಿರುದ್ಧ-ಬಿ.ಶಿವಮೂರ್ತಿ ಹಾಗೂ ಇನ್ನೊಬ್ಬರು ಮೊಕದ್ದಮೆಯಲ್ಲಿನ ಮೇಲೆ ಹೇಳಲಾದ) ನಿರ್ಣಯವನ್ನು ಅವಲಂಬಿಸಿದ್ದು, ಅದರಲ್ಲಿನ 6, 7, 11 ಹಾಗೂ 13 ನೇ ಕಂಡಿಕೆಗಳಲ್ಲಿ, ಕಂಪನಿಗೆ ತಗಾದೆ ನೋಟೀಸನ್ನು ನೀಡದಿರುವಾಗ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಪರಂತುಕವನ್ನು ಪಾಲಿಸದೆ ಕಂಪನಿಯನ್ನು ಜವಾಬ್ದಾರರನ್ನಾಗಿ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದೆ.ಕಂಡಿಕೆ 4 ರಲ್ಲಿನ ಆ ಪ್ರಕರಣದಲ್ಲಿ, ಚೆಕ್ಕನ್ನು ಪಬ್ಲಿಕ್ ಲಿಮಿಟೆಡ್ ಕಂಪನಿಯಾದ ಲಕ್ಷ್ಮಿ ಎರ್ರ ಸಿಮೆಂಟ್ಸ್ ಅಂಡ್ ಸೆರಾಮಿಕ್ಸ್ ಇಂಡಸ್ಟ್ರೀಸ್ ಲಿಮಿಟೆಡ್ನ ನಿರ್ದೇಶಕರು ನೀಡಿದ್ದರು.ಕಂಪನಿಯನ್ನು ಆಪಾದಿತನೆಂದು ಆರೋಪಿಸದೆ ಪ್ರತ್ಯೇಕವಾಗಿ ಅವರ ವಿರುದ್ಧ ದೂರನ್ನು ದಾಖಲಿಸಲಾಗಿತ್ತು ಎಂದು ಅಭಿಪ್ರಾಯಪಡಲಾಗಿದೆ.ಅಂಥ ಸನ್ನಿವೇಶಗಳಲ್ಲಿ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 141 ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ಕಂಪನಿಯನ್ನು ಆಪಾದಿತನೆಂದು ಆರೋಪ ಮಾಡಿರಲಿಲ್ಲ.ಇದರ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಕಂಪನಿಗೆ ನೀಡಿದ ತಗಾದೆ ನೋಟೀಸ್ ಇಲ್ಲದಿರುವಲ್ಲಿ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಪಾಲನೆಯಾಗಿಲ್ಲವೆಂಬ ನಿರ್ಣಯಕ್ಕೆ ಬಂದಿದೆ.ಹೀಗಾಗಿ, ವಿಧಿಸಲಾದ ಸದರಿ ಅನುಪಾತವನ್ನು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲ.

18. ಪ್ರಸ್ತುತ ಮೊಕದ್ದಮೆಯಲ್ಲಿ 1 ನೇ ಆಪಾದಿತನು ಕಂಪನಿಯಾಗಿದ್ದು, 2 ನೇ ಆಪಾದಿತನು, 1 ನೇ ಆಪಾದಿತನ ವ್ಯವಸ್ಥಾಪಕ ನಿರ್ದೇಶಕ ಎಂಬುದು ನಿರ್ವಿವಾದಿತ ಸಂಗತಿ.ಕಂಪನಿಯ ಅಧ್ಯಕ್ಷ ಹಾಗೂ

ವ್ಯವಸ್ಥಾಪಕ ನಿರ್ದೇಶಕರಿಗೆ ಶಾಸನಬದ್ಧ ನೋಟೀಸನ್ನು ಹೊರಡಿಸಿದ್ದಾಗ ಹಾಗೂ ಕಂಪನಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಬ್ಬರೂ ಕಂಪನಿಯ ವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದರೆ, ಆಗ ಪ್ರಾತಿನಿಧಿಕವಾಗಿ ಹೊಣೆಗಾರಿಕೆಯನ್ನು ಹೊಂದಿರುತ್ತದೆ.ಅಂಥ ಸನ್ನಿವೇಶಗಳಲ್ಲಿ, ನೋಟೀಸನ್ನು ಹೊರಡಿಸಿಲ್ಲವಾದ್ದರಿಂದ ವ್ಯಾಜ್ಯಕಾರಣವಿರುವುದಿಲ್ಲ ಎಂಬ ಮಾನ್ಯ ಹಿರಿಯ ವಕೀಲರ ವಾದದಲ್ಲಿ ಯಾವುದೇ ಹುರುಳಿರುವುದಿಲ್ಲ ಹಾಗೂ ಇದು ವಜಾಗೊಳಿಸಲು ಅರ್ಹವಾಗಿರುತ್ತದೆ.

19. ತಮ್ಮ ವಾದವನ್ನು ಮುಂದುವರೆಸಿ, ಕಾನೂನುಬದ್ಧವಾಗಿ ವಸೂಲಿ ಮಾಡಬಹುದಾದ ಋಣ ಅಥವಾ ಹೊಣೆಗಾರಿಕೆ ಇರಲಿಲ್ಲ ಎಂದು ಹೇಳಿರುತ್ತಾರೆ.ನಿಶಾನೆ ಪಿ .20 ರಿಂದ ಹಾಗೂ ಪ್ರತಿವಾದಿ ಸಾಕ್ಷ್ಯ .1 ಹಾಗೂ 2 ರ ಸಾಕ್ಷ್ಯದಿಂದ ತಿಳಿದುಬರುವಂತೆ, ಪ್ರತಿವಾದಿ ಸಾಕ್ಷ್ಯ.1 ಹಾಗೂ ದೂರುದಾರನ ನಡುವೆ ವ್ಯವಸ್ಥಾ ಪತ್ರ ಬರೆದುಕೊಟ್ಟಿದ್ದರೆಂಬುದು ನಿರ್ವಿವಾದ.ವ್ಯವಸ್ಥಾಪತ್ರದ ನಿಬಂಧನೆಗಳ ಪ್ರಕಾರ, ಪತ್ರಕ್ಕೆ ಸಹಿ ಹಾಕುವ ದಿನಾಂಕದಂದು ಪ್ರತಿವಾದಿ ಸಾಕ್ಷ್ಯ .1 ನಗದು ರೂಪದಲ್ಲಿ 25 ಲಕ್ಷ ರೂಪಾಯಿಗಳ ಮೊತ್ತವನ್ನು ದೂರುದಾರನಿಗೆ ನೀಡಿದ್ದು, ಬಾಕಿ ಉಳಿದ 1 ಕೋಟಿ 75 ಲಕ್ಷ ರೂಪಾಯಿಗಳ ಮೊತ್ತಕ್ಕೆ ಪ್ರತಿವಾದಿ ಸಾಕ್ಷ್ಯ.ಬರೋಡಾ ಬ್ಯಾಂಕಿನಿಂದ ಪಡೆದ ಮುಂದಿನ ದಿನಾಂಕದ ಮೂರು ಚೆಕ್ಕುಗಳನ್ನು ನೀಡಿದ್ದನು. ಚೆಕ್ಕುಗಳನ್ನು ನೀಡಿದ ಹಾಗೂ ಅದರಲ್ಲಿರುವ ಸಹಿಯ ಸದರಿ ಸಂಗತಿಯನ್ನು ಒಪ್ಪಿಕೊಂಡಾಗ, ಅಂಥ ಸನ್ನಿವೇಶಗಳಲ್ಲಿ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 139 ನೇ ಪ್ರಕರಣದ ಮೇರೆಗಿನ ಪೂರ್ವಭಾವನೆಗೆ ಬರಬೇಕಾಗುತ್ತದೆ.ವರ್ಗಾವಣೀಯ ಲಿಖಿತಗಳ ಅಧಿನಿಯಮದ 139 ನೇ ಪ್ರಕರಣವು ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಋಣ ಅಥವಾ ಹೊಣೆಗಾರಿಕೆಯು ಇರುತ್ತದೆಯೆಂಬ ಪೂರ್ವಭಾವನೆಯನ್ನು ಕಡ್ಡಾಯಗೊಳಿಸುತ್ತದೆ.ಇದು ನಿರಾಕರಣೀಯ ಅನುಮಾನದ ಸ್ವರೂಪದಲ್ಲಿದ್ದು, ಆಪಾದಿತನಿಗೆ ಪ್ರತಿವಾದವನ್ನು ಎತ್ತಲು ಮುಕ್ತವಾಗಿರುತ್ತದೆ ಹಾಗೂ ಸಂಭಾವ್ಯತೆಯ ಬಾಹುಳ್ಯದ ಮೇಲೆ ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಹೊಣೆಗಾರಿಕೆಯಿರುವುದಿಲ್ಲ ಎಂಬುದಾಗಿ ವಾದಿಸಬಹುದು ಮತ್ತು ರುಜುವಾತುಪಡಿಸಬಹುದು.ರಂಗಪ್ಪ ವಿರುದ್ಧ ಶ್ರೀ ಮೋಹನ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಚ ಕಾನೂನಿನ ಪ್ರಸ್ತಾವವನ್ನು ವಿಧಿಸಿದ್ದು, ಅದರ 16 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"16. ಆಪಾದಿತನು ಶಾಸನಬದ್ಧ ಪೂರ್ವಭಾವನೆಯನ್ನು ಅಲ್ಲಗಳೆಯಲು ಸಂಭವನೀಯ ಪ್ರತಿವಾದವನ್ನು ಎತ್ತಿರಲಿಲ್ಲವೆಂದು ನಿರ್ಣಯಿಸಲು ನ್ಯಾಯಾಲಯಕ್ಕೆ ಈ ಎಲ್ಲಾ ಸನ್ನಿವೇಶಗಳು ಕಾರಣವಾಗಿವೆ.ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

"6. ಚೆಕ್ಕು ಒಮ್ಮೆ ಆಪಾದಿತನ ಲೆಕ್ಕಕ್ಕೆ ಸಂಬಂಧಪಟ್ಟರೆ, ಸದರಿ ಚೆಕ್ಕಿನ ಮೇಲಿರುವ ಸಹಿಗಳನ್ನು ಅಂಗೀಕರಿಸಿ ಒಪ್ಪಿಕೊಂಡರೆ, ಆಗ ವರ್ಗಾವಣೀಯ ಲಿಖಿತಗಳ ಅಧಿನಿಯಮದ 139 ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂಥ ಪ್ರಾರ ಂ ಭಿಕ ಪೂರ್ವಭಾವನೆಯನ್ನು ದೂರುದಾರನ ಪರವಾಗಿ ನ್ಯಾಯಾಲಯವು ಮಾಡಬೇಕಾಗುತ್ತದೆ.ವರ್ಗಾವಣೀಯ ಲಿಖಿತಗಳ ಅಧಿನಿಯಮದ 139 ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪೂರ್ವಭಾವನೆಯು ಕಡ್ಡಾಯ ಪೂರ್ವಭಾವನೆಯಾಗಿದೆಯೇ ವಿನಃ ಸಾಮಾನ್ಯ ಪೂರ್ವಭಾವನೆಯಾಗಿರುವುದಿಲ್ಲ.ಆದರೆ, ಆಪಾದಿತನು ಸದರಿ ಪೂರ್ವಭಾವನೆಯನ್ನು ಅಲ್ಲಗಳೆಯಲು ಹಕ್ಕುಳ್ಳವನಾಗಿರುವನು.ಪೂರ್ವಭಾವನೆಯನ್ನು ಅಲ್ಲಗಳೆಯುವ ಸಲುವಾಗಿ ಆಪಾದಿತನು ರುಜುವಾತುಪಡಿಸಬೇಕಾಗಿರುವ ಸ ಂ ಗತಿಯು ನೀಡಲಾದ ಸನ್ನಿವೇಶಗಳಲ್ಲಿ ಪ್ರತಿಯೊಂದು ಸಂದರ್ಭಕ್ಕೂ ಭಿನ್ನವಾಗಿರುತ್ತದೆ.ಆದರೆ, ಆಪಾದಿತನಿಗೆ ಕೇವಲ ಸಂಭವನೀಯ ವಿವರಣೆಯನ್ನು ಮಾತ್ರವಲ್ಲದೆ, ಅಲ್ಲಗಳೆಯುವಿಕೆಯ ಸಾಕ್ಷ್ಯದ ರೂಪದಲ್ಲಿ ಸಂಭವನೀಯ ವಿವರಣೆಗಿಂತಲೂ ಹೆಚ್ಚಿನದಾಗಿರಬೇಕು ಎಂಬ ಸಂಗತಿ ಹಾಗೇ ಉಳಿಯುತ್ತದೆ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಲ್ಲಗಳೆಯುವಿಕೆಯ ಸಾಕ್ಷ್ಯದ ರೂಪದಲ್ಲಿ ಎತ್ತಲಾದ ಪ್ರತಿವಾದವು

ನ್ಯಾಯಾಲಯವು ಸ್ವೀಕರಿಸುವಷ್ಟು ಸಂಭವನೀಯವಾಗಿರಬೇಕು ಹಾಗೂ ಸಮರ್ಥನೀಯವಾಗಿರಬೇಕು. ಆಪಾದಿತನು ಎತ್ತಿದ ಪ್ರತಿವಾದ ಏನೆಂದರೆ, ಖಾಲಿ ಚೆಕ್ಕನ್ನು ತಾನು ಕಳೆದುಕೊಂಡಿದ್ದು, ಅದನ್ನು ದೂರುದಾರನು ಬಳಕೆ ಮಾಡಿಕೊಂಡಿದ್ದಾನೆ ಎಂಬುದಾಗಿತ್ತು.ಆ ಆ ಅಡೆತಡೆಯನ್ನು ಆಪಾದಿತನು ದಾಟಿದ ಹೊರತು, ಚೆಕ್ಕನ್ನು ಕೈಸಾಲಕ್ಕೆ ಸಂಬಂಧಪಟ್ಟಂತೆ ನೀಡಲಾಗಿದೆಯೇ ಅಥವಾ ದೂರುದಾರನು ವ್ಯಯ ಮಾಡಿದ ಮೊತ್ತಕ್ಕೆ ಸಂಬಂಧಪಟ್ಟಂತೆ ನೀಡಲಾಗಿದೆಯೇ ಎಂಬ ಬಗ್ಗೆ ಅವನು ಎತ್ತಿದ ಮತ್ತೊಂದು ಪ್ರತಿವಾದವನ್ನು ಪರಿಗಣಿಸುವ ಅಗತ್ಯವಿರುವುದಿಲ್ಲ. ಆದ್ದರಿಂದ, ಆಪಾದಿತನು, ಅಧಿನಿಯಮದ 139 ನೇ ಪ್ರಕರಣದ ಮೂಲಕ ತನ್ನ ಮೇಲೆ ಮಾಡಲಾದ ಪೂರ್ವಭಾವನೆಯನ್ನು ಅಲ್ಲಗಳೆಯಲು ಸಂಭಾವ್ಯ ಪ್ರತಿವಾದವನ್ನು ಎತ್ತಲು ವಿಫಲನಾಗಿದ್ದರಿಂದ ಅಧಿವಿಚಾರಣಾ ನ್ಯಾಯಾಲಯವು ಗಮನಿಸಿರುವ ದೂರುದಾರನ ಕಡೆಯಿ 0 ದಾಗಿರುವ ಆಪಾದಿತನ ಅಸಮಂಜಸತೆಯು ಸಾಕ್ಷ್ಯಾಧಾರವಾಗಿರುವುದಿಲ್ಲ ಎಂದು ಉಚ್ಚ ನ್ಯಾಯಾಲಯವು ನಿರ್ಣಯಿಸಿದೆ.ತದನುಸಾರವಾಗಿ, ಉಚ್ಚ ನ್ಯಾಯಾಲಯವು ಅಪರಾಧ ಚ ನಿರ್ಣಯದ ತೀರ್ಮಾನವನ್ನು ದಾಖಲಿಸಿದೆ.

20. ಪ್ರತಿವಾದಿ ಸಾಕ್ಷ್ಯ .1 ಹಾಗೂ 2 ರ ಸಾಕ್ಷ್ಯವನ್ನು ಅವಗಾಹನೆ ಮಾಡಿದ ಮೇಲೆ, ಪ್ರಾ.ಸಾ .1 ರ ಪಾಟೀ-ಸವಾಲಿನಿಂದ ಸದರಿ ಪೂರ್ವಭಾವನೆಯನ್ನು ಅಲ್ಲಗಳೆಯಲು ಯಾವುದೇ ಅಭಿಪ್ರಾಯವನ್ನು ಹೊರದೆಗೆಯಲಾಗಿರುವುದಿಲ್ಲ.

21. ನಿಶಾನೆ ಪಿ .7 ರಲ್ಲಿನ ವ್ಯವಸ್ಥಾಪತ್ರವನ್ನು ಅನುಸರಿಸಿ, ಆಪಾದಿತನ ವಿರುದ್ಧ ದೂರುದಾರನು ದಾಖಲಿಸಿದ ಕ್ರಿಮಿನಲ್ ಪ್ರಕರಣವನ್ನು ಹಿಂಪಡೆಯ ಬೇಕಾಗುತ್ತದೆಯೆಂಬುದು, ಹಾಗೆಯೇ ಅವನು ಚೆಕ್ ಮೊತ್ತವನ್ನು ಸಂದಾಯ ಮಾಡಲು ಯಾವುದೇ ವ್ಯವಸ್ಥೆಗಳನ್ನು ಮಾಡಿರುವುದಿಲ್ಲ ಎಂಬುದು ಆಪಾದಿತನ ನಿರ್ದಿಷ್ಟ ವಾದವಾಗಿದೆ.ನಿಶಾನೆ-ಪಿ .7 ರಲ್ಲಿನ ವ್ಯವಸ್ಥಾಪತ್ರವನ್ನು ಸೂಕ್ಷ್ಮವಾಗಿ ಓದಿದ ನಂತರ, ಸದರಿ ಮೊತ್ತವನ್ನು ಸ್ವೀಕರಿಸಿದ ಮೇಲೆ ಆಪಾದಿತನ ವಿರುದ್ಧ ದಾಖಲಿಸಲಾದ ಮೊಕದ್ದಮೆಯನ್ನು ಹಿಂಪಡೆಯಲು ಒಪ್ಪಿಕೊಳ್ಳಲಾಗಿದೆ.ಮೊಕದ್ದಮೆಯನ್ನು ಹಿಂಪಡೆಯುವುದು ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಹಿಂದಿನ ಷರತ್ತಾಗಿರುವುದಿಲ್ಲ.ಆದರೆ, ಇದು ತದ್ವಿರುದ್ಧವಾಗಿದೆ.ಪ್ರಾರಂಭಿಕವಾಗಿ, ಚೆಕ್ ಮೊತ್ತವನ್ನು ಅವನು ಸಂದಾಯ ಮಾಡಬೇಕು ಹಾಗೂ ಇದಾದನಂತರ ಕ್ರಿಮಿನಲ್ ಮೊಕದ್ದಮೆಯನ್ನು ಹಿಂಪಡೆಯಬೇಕಾಗುತ್ತದೆ.ಅಪೀಲು ನ್ಯಾಯಾಲಯದ ಮುಂದೆ ಹೆಚ್ಚಿನ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ಹಿರಿಯ ವಕೀಲರು ವಾದಿಸಿದರೂ ಕೂಡ, ಸದರಿ ದಸ್ತಾವೇಜುಗಳನ್ನು ಅಪೀಲು ನ್ಯಾಯಾಲಯವು ಪರಿಗಣಿಸಿರುವುದಿಲ್ಲ.ಅಪೀಲು ನ್ಯಾಯಾಲಯದ ಮುಂದೆ ಸಂಪೂರ್ಣ ಸಾಕ್ಷ್ಯಾಧಾರವು ಲಭ್ಯವಿರುತ್ತದೆಯಾದರೂ, ಹೆಚ್ಚಿನ ಪ್ರತಿವಾದ ಸಾಕ್ಷ್ಯ ಎ ನಡೆಸಲು ಹಾಗೂ ದಸ್ತಾವೇಜುಗಳನ್ನು ಗುರುತು ಮಾಡಲು ಪ್ರತಿವಾದಿ ಸಾಕ್ಷ್ಯ .1 ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರೂ ಕೂಡ, ಸದರಿ ಸಾಕ್ಷ್ಯಾಧಾರವನ್ನು ಏಕೆ ಪರಿಗಣಿಸಿಲ್ಲ ಎಂಬ ಬಗ್ಗೆ ವಿವರಿಸಿರುವುದಿಲ್ಲ.ಇದಕ್ಕೆ ಅಪೀಲು ನ್ಯಾಯಾಲಯವು ಯುಕ್ತ ಕಾರಣಗಳನ್ನು ಸಹ ನೀಡಿರುವುದಿಲ್ಲ.

22. 2 ನೇ ಆಪಾದಿತನ ವರ್ತನೆಯನ್ನು ಒಪ್ಪಿಕೊಳ್ಳುವುದಾದರೆ, ಒಂದಲ್ಲಾ ಒಂದು ನೆಪಗಳ ಮೇಲೆ ಅವನು ವ್ಯವಹರಣೆಗಳನ್ನು ಲ ಂ ಬಿಸಲು ಬಯಸುತ್ತಾನೆಂಬುದನ್ನು ಇದು ತೋರಿಸುತ್ತದೆ.ವಿ. ರಾಜಕುಮಾರಿ -ವಿರುದ್ಧ ಪಿ. ಸುಬ್ಬರಾಮ ನಾಯ್ಡು ಹಾಗೂ ಮತ್ತೊಬ್ಬರು (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸರಿಯಾಗಿಯೇ ಅಭಿಪ್ರಾಯಪಟ್ಟಿರುವಂತೆ, ಇದು ಅಪ್ರಮಾಣಿಕನು ನುಣುಚಿಕೊಳ್ಳುವುದಕ್ಕೆ ಹಾಗೂ ಪ್ರಾಮಾಣಿಕವಾಗಿ ಹಣ ಸಂದಾಯ ಮಾಡಿದ ವ್ಯಕ್ತಿಯನ್ನು ಸಿಕ್ಕಿಸುವುದಕ್ಕೆ ಸಹಾಯಕವಾಗುತ್ತಿದೆ ಮತ್ತು ನೈಜ ಕಾನೂನಾತ್ಮಕ ಕ್ರಮಗಳನ್ನೇ ವಿಫಲಗೊಳಿಸುವಂತಿದೆ.ಈ ಹಿನ್ನೆಲೆಯಲ್ಲಿ, ಕಾನೂನಾತ್ಮಕವಾಗಿ ವಸೂಲಿ ಮಾಡಬಹುದಾದ ಯಾವುದೇ ಋಣ ಅಥವಾ ಹೊಣೆಗಾರಿಕೆ

ಇರುವುದಿಲ್ಲ ಹಾಗೂ ಅಪೀಲು ನ್ಯಾಯಾಲಯವು ಹೆಚ್ಚಿನ ದಸ್ತಾವೇಜುಗಳನ್ನು ಯುಕ್ತವಾಗಿ ವಿವೇಚಿಸಿರುವುದಿಲ್ಲ ಹಾಗೂ ಸದರಿ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಒಂದೇ ಒಂದು ಪದವನ್ನೂ ಉಚ್ಚರಿಸಿರುವುದಿಲ್ಲ ಎಂಬ ಮಾನ್ಯ ಹಿರಿಯ ವಕೀಲರ ವಾದವನ್ನು ಒಪ್ಪಲಾಗುವುದಿಲ್ಲ.ಸದರಿ ದಸ್ತಾವೇಜುಗಳು ಹಾಗೂ ಅರ್ಜಿಯನ್ನು ಮರು ವಿವೇಚಿಸಿದ ಮೇಲೂ ಕೂಡ, ಅರ್ಜಿದಾರರು ಆಪಾದಿತರು, ಅವರ ವಾದವನ್ನು ಒಪ್ಪಿಕೊಳ್ಳಲು ಯಾವುದೇ ಒಳ್ಳೆಯ ಆಧಾರಗಳನ್ನು ನೀಡಿರುವುದಿಲ್ಲವೆಂಬುದು ನನ್ನ ಭಾವನೆ.

23. ಮಾನ್ಯ ಹಿರಿಯ ವಕೀಲರು ಎತ್ತಿರುವ ಮುಂದಿನ ವಾದವೆಂದರೆ, ಅಧಿವಿಚಾರಣಾ ನ್ಯಾಯಾಲಯವುದಿನಾಂಕ: 22.12.2017 ರಂದು ವಿಷಯವನ್ನು ಆಲಿಸಿದ್ದು, ತದನಂತರದ ಪುನಃ ಈ ಮೊಕದ್ದಮೆಯನ್ನು ಮುಂದೂಡಲಾಗಿದ್ದು,ದಿನಾಂಕ: 10.12.2018 ರಂದು ತೀರ್ಪನ್ನು ಹೊರಡಿಸಿರುತ್ತಾರೆ ಎಂಬುದಾಗಿದೆ. ನ್ಯಾಯಾಲಯವು, ಅನಿಲ್ ರಾಜ್ ಮತ್ತು ಇತರರು -ವಿರುದ್ಧ- ಬಿಹಾರ ರಾಜ್ಯ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಚ ಮಾರ್ಗಸೂಚಿಗಳನ್ನು (ಮೇಲೆ ಹೇಳಲಾದ) ಅನುಸರಿಸಿಲ್ಲವೆಂಬುದು ಮಾನ್ಯ ಹಿರಿಯ ವಕೀಲರ ನಿರ್ದಿಷ್ಟ ವಾದವಾಗಿದೆ.ಮೊಕದ್ದಮೆಯನ್ನು ಅಧಿವಿಚಾರಣೆ ಅಥವಾ ಸುನಾವಣೆ ಮಾಡಿದ ಕೂಡಲೇ, ತೀರ್ಪನ್ನು ಘೋಷಿಸಬೇಕಾಗುತ್ತದೆಯೆಂಬ ಬಗ್ಗೆ ನನಗೆ ಯಾವುದೇ ಭಿನ್ನಾಭಿಪ್ರಾಯವಿರುವುದಿಲ್ಲ.ದಂಡ ಪ್ರಕ್ರಿಯಾ ಸಂಹಿತೆಯ 353 ನೇ ಪ್ರಕರಣದಲ್ಲಿ ಬಳಸಿರುವ ತರುವಾಯದ CC ಸಮಯದಲ್ಲಿ " ಎಂಬುದು, ಸಾಧ್ಯವಾದಷ್ಟು ಬೇಗ ತೀರ್ಪನ್ನು ಘೋಷಿಸಬೇಕಾಗಿದೆ ಹಾಗೂ ಇದನ್ನು ಅನಿರ್ದಿಷ್ಟ ಅವಧಿಯವರೆಗೆ ಮುಂದೂಡುವಂತಿಲ್ಲ ಎಂದು ಹೇಳಲಾಗಿದ್ದರೂ, ಮೊದಲ ಅಪೀಲು ನ್ಯಾಯಾಲಯದ ವ್ಯವಹರಣೆಯ ದಾಖಲೆಯ ಪತ್ರದಿಂದ ಕಂಡುಬರಬಹುದಾದಂತೆ,ದಿನಾಂಕ: 07.12.2018 ರಂದು ಪ್ರತ್ಯರ್ಜಿದಾರನ ಮನವಿಯಂತೆ ತೀರ್ಪಿಗಾಗಿ ಇದನ್ನು ದಾಖಲಿಸಿದ ನಂತರ ಸದರಿ ಮೊಕದ್ದಮೆಯನ್ನು ವ್ಯವಹರಿಸಲು ತೆಗೆದುಕೊಳ್ಳಲಾಗಿದೆ ಹಾಗೂ ತರುವಾಯದ ದಿನಾಂಕಗಳ ನಂತರ ವಾದಗಳನ್ನು ಸಹ ಆಲಿಸಲಾಗಿತ್ತು ಎಂಬುದನ್ನು ಸೂಚಿಸುತ್ತದೆ.ದಿನಾಂಕ: 07.04.2018 ರಂದು ಕೂಡ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ವಕೀಲರು ಹಾಜರಿದ್ದರು ಹಾಗೂ 09.04.2018 ರಂದು ವಾದಗಳಿಗಾಗಿ ಇದನ್ನು ಮುಂದೂಡಲಾಯಿತು.ತದನಂತರ ಮೊಕದ್ದಮೆಯನ್ನು ತೀರ್ಪಿಗಾಗಿ ಮುಂದೂಡಲಾಗಿತ್ತು ಹಾಗೂದಿನಾಂಕ: 10.12.2018 ರಂದು ತೀರ್ಪನ್ನು ಪ್ರಕಟಿಸಲಾಗಿದೆ.ವಿಚಾರಣೆ ನಡೆಸಿದ ಕೂಡಲೇ ಸದರಿ ತೀರ್ಪನ್ನು ಉದ್ಘೋಷಿಸದ ಕಾರಣ ಮಾತ್ರದಿಂದ ಮತ್ತು ಸಮಸ್ಯೆಗೆ ಸಂಬಂಧಿಸಿದ ಅಧಿನಿಯಮಿತಿಯನ್ನು ರಚಿಸುವವರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಮಾರ್ಗಸೂಚಿಗಳು ಜಾರಿಯಲ್ಲಿರುತ್ತವೆಯಾದರೂ, ಅಧಿ ವಿಚಾರಣಾ ನ್ಯಾಯಾಲಯದ ನಡವಳಿಯು, ಕಾನೂನಿನ ಆಜ್ಞೆಯನ್ನು ಹಾಗೂ ಪೂರ್ವನಿದರ್ಶನವನ್ನು ಅನುಸರಿಸಿರುವುದಿಲ್ಲ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಹಾಗೂ ಹೊಣೆಗಾರಿಕೆ ಹಾಗೂ ಶ್ರದ್ಧಾಪೂರ್ವಕವಾಗಿ ತೆಗೆದುಕೊಂಡಿರುವ ಪ್ರಮಾಣವಚನವನ್ನು ನೆರವೇರಿಸಲು ವಿಫಲವಾಗಿದೆ ಹಾಗೂ ಅದಕ್ಕಿಂತ ಹೆಚ್ಚಾಗಿ ಮಾರ್ಗಸೂಚಿಗಳನ್ನು ಅನುಸರಿಸದಿರುವುದಕ್ಕಾಗಿ ಮಾನ್ಯ ನ್ಯಾಯಮೂರ್ತಿಗಳು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿತ್ತು; ಆ ಆಧಾರದ ಮೇಲೆ ಎದುರುದಾರ-ದೂರುದಾರನಿಗೆ ಸಹಾಯ ಮಾಡುವ ಸಲುವಾಗಿ ಉದ್ದೇಶಪೂರ್ವಕವಾಗಿ ಸದರಿ ನಿಲುವಳಿಗಳನ್ನು ನೀಡಲಾಯಿತೆಂಬ ಮಾನ್ಯ ಹಿರಿಯ ವಕೀಲರ ವಾದವನ್ನು ಪುಷ್ಟೀಕರಿಸಲು ಯಾವುದೇ ಇತರ ಸಮರ್ಪಕ ಸಾಕ್ಷ್ಯಾಧಾರವಿಲ್ಲದೆ, ಮೊದಲ ಅಪೀಲು ನ್ಯಾಯಾಲಯ ನೀಡಿರುವ ತೀರ್ಪು, ತಪ್ಪಿನಿಂದ ಕೂಡದೆ ಹಾಗೂ ಕಾನೂನುಬಾಹಿರವಾಗಿದೆಯೆಂದು ಅಭಿಪ್ರಾಯಪಡಲಾಗುವುದಿಲ್ಲ.ಆ ಹಿನ್ನೆಲೆಯಲ್ಲಿ, ಸದರಿ ವಾದಕ್ಕೆ ಸಹ ಯಾವುದೇ ಕಾರಣವನ್ನು ಸಮರ್ಥಿಸುವುದಿಲ್ಲ ಹಾಗೂ ಇದು ವಜಾಗೊಳಿಸಲು ಅರ್ಹವಾಗಿದ್ದು, ತದನುಸಾರವಾಗಿ ಇದನ್ನು ವಜಾಗೊಳಿಸಲಾಗಿದೆ.

24. ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಹಾಗೂ ಮೊದಲ ಅಪೀಲು ನ್ಯಾಯಾಲಯದ ತೀರ್ಪನ್ನು ನಾನು ಎಚ್ಚರಿಕೆಯಿಂದ ಹಾಗೂ ಜಾಗರೂಕತೆಯಿಂದ ಪರಿಶೀಲಿಸಿರುತ್ತೇನೆ.ಸದರಿ ತೀರ್ಪುಗಳು, ತಪ್ಪಿನಿಂದ ಕೂಡಿಲ್ಲ ಅಥವಾ ಕಾನೂನುಬಾಹಿರವಾಗಿಲ್ಲ.ಆದುದರಿಂದ ಇವುಗಳು ಸ್ಥಿರೀಕರಿಸಲು ಅರ್ಹವಾಗಿರುತ್ತವೆ.ತದನುಸಾರವಾಗಿ ಇವುಗಳನ್ನು ಸ್ಥಿರೀಕರಿಸಲಾಗಿದೆ.

ಮೇಲಿನ ನನ್ನ ಚರ್ಚೆಗಳ ಹಿನ್ನೆಲೆಯಲ್ಲಿ, ನಾನು ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತೇನೆ:

1 ನೇ ಅರ್ಜಿದಾರ-ಕಂಪನಿಯು ಸಲ್ಲಿಸಿದ ಅರ್ಜಿಯನ್ನು, ಅರ್ಜಿದಾರರ ಪರ ಮಾನ್ಯ ವಕೀಲರು ಸಲ್ಲಿಸಿದದಿನಾಂಕ: 28.08.2019 ರ ಮೆಮೊವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂಪಡೆಯಲಾಗಿದೆ ಎಂಬಂತೆ ವಜಾಗೊಳಿಸಲಾಗಿದೆ.

2 ನೇ ಅರ್ಜಿದಾರ -2 ನೇ ಆಪಾದಿತನು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಪ್ರಧಾನ ಅರ್ಜಿಯನ್ನು ವಜಾಗೊಳಿಸಿದ ಹಿನ್ನೆಲೆಯಲ್ಲಿ, ವಾದಕಾಲೀನ ಅರ್ಜಿಸಂಖ್ಯೆ: 3/2019 ನ್ನು ಪರಿಗಣನೆಗೆ ತೆಗೆದುಕೊಂಡಿಲ್ಲವಾದ್ದರಿಂದ ಅದನ್ನು ವಜಾಗೊಳಿಸಲಾಗಿದೆ.